ಸಂಪುಟ : 8 ಸಂಚಿಕೆ : 150 ಪುಟ : 4 ಬೆಲೆ : 3.00 ರವಿವಾರ ಜುಲೈ 16, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್


# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 150 Pages : 4 Price : 3.00 Sunday July 16, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಜಿಲ್ಲಾ ಮಟ್ಟದ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ಸ್ಪರ್ಧೆ ಇಂದು




■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆ(ರಿ) ಗದಗ ಇವರು ಗದಗ ಜಿಲ್ಲಾ ಯೋಗ ಒಕ್ಕೂಟ(ರಿ) ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಗದಗ ಇವರುಗಳ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಅಮೆಚೂರ್ ಯೋಗಾಸನ ಕ್ರೀಡಾ ಸಂಸ್ಥೆ(ರಿ) ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ವಿಶ್ವ ಅರ್ಹತೆಯ (ಆರೋಗ್ಯ) ದಿನಾಚರಣೆ ಮತ್ತು ರಾಜ್ಯ ಮಟ್ಟದ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಜಿಲ್ಲಾ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ಪ್ರಯುಕ್ತ 26ನೇ ಗದಗ ಜಿಲ್ಲಾ ಮಟ್ಟದ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ಸ್ಪರ್ಧೆಗಳು ಇಂದು ಬಸವ ಯೋಗ ಮಂದಿರ (ಬಸವ ಪ್ರಭೆ ಕ್ಯಾಂಪಸ್)ದಲ್ಲಿ ಮುಂಜಾನೆ 10.30ಕ್ಕೆ ಜರುಗಲಿವೆ.

ಸಮಾರಂಭವನ್ನು ಗಣ್ಯ ವರ್ತಕರಾದ ಸದಾನಂದ ಕಾಮತ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಶರಣು ಗೋಗೇರಿ ಆಗಮಿಸುವರು. ಅಧ್ಯಕ್ಷತೆಯನ್ನು ಗದಗ ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ಎಂ ಎಸ್ ಶಿರಿಯಣ್ಣವರ ವಹಿಸುವರು.

ಯೋಗ ಕ್ರೀಡಾಸಕ್ತರೆಲ್ಲರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯೋಗ ಕ್ರೀಡೆಯನ್ನು ಪ್ರೋತ್ಸಾಹಿಸಬೇಕೆಂದು ಗದಗ ಜಿಲ್ಲಾ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆಯ ಅಧ್ಯಕ್ಷ ಕೆ ಎಸ್ ಪಲ್ಲೇದ ಮತ್ತು ಕೋಶಾಧ್ಯಕ್ಷ ರವಿ ಉಮಚಗಿ ವಿನಂತಿಸಿದ್ದಾರೆ.

### ಹಸಿವು ಮುಕ್ತ ಕರ್ನಾಟಕಕ್ಕೆ ಅನ್ನಭಾಗ್ಯ ಆಧಾರ: ಜಿಲ್ಲೆಯಲ್ಲಿ ನೇರ ನಗದು ವರ್ಗಾವಣೆಗೆ ಇಂದು ಚಾಲನೆ

# ಹಸಿವುಮುಕ್ತ ಕರ್ನಾಟಕದತ್ತ ಹೆಜ್ಜೆ







■ ವಿಜಯಸಾಕ್ಷಿ ಸುದ್ದಿ, ಗದಗ

ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯದಂತೆ ಜನರ ಆಶೀರ್ವಾದದಿಂದ ಆರಿಸಿ ಬಂದ ಒಂದು ಸರ್ಕಾರ, ಉಳ್ಳವರ ದನಿಯಾಗುವ ಬದಲು ಜನಸಾಮಾನ್ಯರ ದನಿಯಾಗಬೇಕು. ಅದರಂತೆ, ಬಡವರ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಆರ್ಥಿಕತೆಯ ಬಲವರ್ಧನೆಗೆ ದಿಟ್ಟ ನಿರ್ಧಾರ ಕೈಗೊಂಡ ರಾಜ್ಯ ಸರ್ಕಾರ 'ಅನ್ನಭಾಗ್ಯ' ಯೋಜನೆಯನ್ನು ಜಾರಿಗೊಳಿಸುವ ಮೂಲಕ ಹಸಿವು ಮುಕ್ತ ಕರ್ನಾಟಕದೆಡೆಗೆ ದಾಪುಗಾಲಿಟ್ಟಿದೆ.

ಜನಸಾಮಾನ್ಯರ ನೆಮ್ಮದಿಯ ಬದುಕಿಗೆ ಅನ್ನಭಾಗ್ಯದಂತಹ ಯೋಜನೆಗಳನ್ನು ಅನುಷ್ಠಾನಗೊಳಿಸಿ 'ಹಸಿವು ಮುಕ್ತ ಕರ್ನಾಟಕ'ದ ಸಂಕಲ್ಪಕ್ಕೆ ಪಣತೊಡಲಾಗಿದೆ. ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿ



ನೀಡುವ ಗ್ಯಾರಂಟಿಯಿಂದ ಜನರನ್ನು ಸೋಮಾರಿ ಮಾಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ, ಮೂರು ಹೊತ್ತು ಊಟ ಮಾಡುವವರಿಗೆ ಇದರ ಬೆಲೆ ಗೊತ್ತಾಗುವುದಿಲ್ಲ. ಇದು ಹಸಿದವರ ಹೊಟ್ಟೆ ತುಂಬಿಸಲು ಸರ್ಕಾರ ಮಾಡುತ್ತಿರುವ ನೆರವಿನ ಯೋಜನೆಯಾಗಿದೆ.

ಮಕ್ಕಳಿಗೆ ಜ್ವರ ಬಂದಾಗ ಅವರ ತಾಯಂದಿರು ಒಂದು ತುತ್ತು ಅನ್ನಕ್ಕಾಗಿ ಪಡುತ್ತಿರುವ ಕಷ್ಟವನ್ನು ಕಣ್ಣಾರೆ ಕಂಡಿದ್ದೇನೆ. ಸಿದ್ಧರಾಮನಹುಂಡಿಯಲ್ಲಿ ಇಂತಹ ಜೀವನಗಳನ್ನು ನೋಡುತ್ತಲೇ ಬೆಳೆದವನು ನಾನು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಅನೇಕ ಬಾರಿ ಹೇಳಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ, ಮನೆಗಳ ಆರ್ಥಿಕ ಸ್ಥಿತಿಯಲ್ಲಿಯೂ ಚೇತರಿಕೆ ಕಾಣಲು ▶▶3 ನೇ ಪುಟಕ್ಕೆ

**ಅನ್ನಭಾಗ್ಯ ಗದಗ ಜಿಲ್ಲೆಯ ಫಲಾನುಭವಿಗಳು**

ಅನ್ನಭಾಗ್ಯ ಯೋಜನೆಯ ನಗದು ವರ್ಗಾವಣೆಗೆ ಜಿಲ್ಲೆಯಲ್ಲಿ ಸದ್ಯ ಬಿಪಿಎಲ್ ಹಾಗೂ ಎಎಪಿ ಒಟ್ಟಾರೆ ಅರ್ಹ 1,88,833 ಪಡಿತರ ಚೀಟಿದಾರರಿದ್ದು, 6,43,423 ಫಲಾನುಭವಿಗಳಿಗೆ 10,36,55,120 ರೂ. ನೇರ ನಗದು ಜಮೆ ಆಗಲಿದೆ. ಇನ್ನುಳಿದಂತೆ ಬಾಕಿ ಇರುವ ಇ-ಕೆವೈಸಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಅರ್ಹ ಎಲ್ಲ ಫಲಾನುಭವಿಗಳಿಗೂ ನಗದು ವರ್ಗಾವಣೆ ಸೌಲಭ್ಯ ದೊರಕಲಿದೆ.

ತಾಲೂಕುವಾರು ವಿವರ: ಗದಗ-58,606 ಪಡಿತರ ಚೀಟಿದಾರರಿದ್ದು 1,97,231 ಫಲಾನುಭವಿಗಳಿಗೆ 3,20,18,480 ರೂ. ನಗದು ಜಮೆ ಆಗಲಿದೆ. ಮುಂಡರಗಿ-26,340 ಪಡಿತರ ಚೀಟಿದಾರರಿದ್ದು, 88,378 ಫಲಾನುಭವಿಗಳಿಗೆ 1,40,30,440 ರೂ. ನಗದು ಜಮೆ ಆಗಲಿದೆ. ನರಗುಂದ-18,058 ಪಡಿತರ ಚೀಟಿದಾರರಿದ್ದು, 61,509 ಫಲಾನುಭವಿಗಳಿಗೆ 97,83,840 ರೂ. ನಗದು ಜಮೆ ಆಗಲಿದೆ. ರೋಣ-27,270 ಪಡಿತರ ಚೀಟಿದಾರರಿದ್ದು, 91,579 ಫಲಾನುಭವಿಗಳಿಗೆ 1,47,32,710 ರೂ. ನಗದು ಜಮೆ ಆಗಲಿದೆ. ಶಿರಹಟ್ಟಿ-18,281 ಪಡಿತರ ಚೀಟಿದಾರರಿದ್ದು, 62,579 ಫಲಾನುಭವಿಗಳಿಗೆ 1,00,39,350 ರೂ. ನಗದು ಜಮೆ ಆಗಲಿದೆ. ಗಜೇಂದ್ರಗಡ-20,576 ಪಡಿತರ ಚೀಟಿದಾರರಿದ್ದು, 73,383 ಫಲಾನುಭವಿಗಳಿಗೆ 1,19,98,430 ರೂ. ನಗದು ಜಮೆ ಆಗಲಿದೆ. ಲಕ್ಷ್ಮೇಶ್ವರ-19,702 ಪಡಿತರ ಚೀಟಿದಾರರಿದ್ದು, 68,764 ಫಲಾನುಭವಿಗಳಿಗೆ 1,10,51,870 ರೂ. ನಗದು ಜಮೆ ಆಗಲಿದೆ.

### ಕಳೆದುಹೋದ ಮೊಬೈಲ್ ಪತ್ತೆ ಹಚ್ಚಿ ವಾರಸುದಾರರಿಗೆ ಹಸ್ತಾಂತರ: ಸಿಬ್ಬಂದಿಗಳ ಕರ್ತವ್ಯಕ್ಕೆ ಎಸ್ ಪಿ ಮೆಚ್ಚುಗೆ

## ಮೊಬೈಲ್, ಬೆಲೆಬಾಳುವ ವಸ್ತುಗಳ ಬಗ್ಗೆ ಜಾಗ್ರತೆವಹಿಸಿ



> ಸಾರ್ವಜನಿಕರು ತಮ್ಮ ಮೊಬೈಲ್ ಫೋನ್‌ಗಳನ್ನು ಹಾಗೂ ಬೆಲೆಬಾಳುವ ವಸ್ತುಗಳನ್ನು ಸಾರ್ವಜನಿಕ, ಜನನಿಬಿಡ ಸ್ಥಳಗಳಲ್ಲಿ ಜಾಗೃತೆಯಿಂದ ಇಟ್ಟುಕೊಳ್ಳಬೇಕು. ಮೊಬೈಲ್ ಪತ್ತೆಗಾಗಿ ನಾವು ವಿಶೇಷ ಜಾಗೃತಿ ವಹಿಸುತ್ತಿದ್ದು, ಮೊಬಿಫೈ ಹಾಗೂ ಸಿಇಆರ್‌ಐನಲ್ಲಿ ಕಳೆದುಹೋದ ಮೊಬೈಲ್ ಪತ್ತೆಗೆ ಕ್ರಮ ವಹಿಸುತ್ತಿದ್ದೇವೆ. ಶನಿವಾರ ಹಸ್ತಾಂತರಿಸಿದ ಮೊಬೈಲ್‌ಗಳನ್ನು ಅಂತರ್ ಜಿಲ್ಲೆ ಹಾಗೂ ಅಂತರ ರಾಜ್ಯದಿಂದ ಪತ್ತೆ ಹಚ್ಚಿ ತಂದಿದ್ದೇವೆ. ಮೊಬೈಲ್ ಪತ್ತೆಹಚ್ಚಲು ಶ್ರಮವಹಿಸಿದ ಪೊಲೀಸ್ ಸಿಬ್ಬಂದಿಗಳಿಗೆ ಸೂಕ್ತ ಬಹುಮಾನ ನೀಡಲಾಗುತ್ತದೆ.
>
> – ಬಿ ಎಸ್ ನೇಮಗೌಡ.
> ಪೊಲೀಸ್ ವರಿಷ್ಠಾಧಿಕಾರಿಗಳು, ಗದಗ.

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಕಳ್ಳತನವಾದ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಕಳೆದುಹೋದ ಮೊಬೈಲ್ ಫೋನ್‌ಗಳ ಪತ್ತೆಗಾಗಿ ವಿಶೇಷ ತಂಡವನ್ನು ರಚಿಸಿ ಕಾರ್ಯಪ್ರವೃತ್ತರಾಗಿದ್ದೇವೆ. ವಿಶೇಷ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಪ್ರಯತ್ನದಿಂದ ಇಂತಹ ಮೊಬೈಲ್‌ಗಳನ್ನು ಪತ್ತೆ ಮಾಡಿ, ಅವುಗಳ ವಾರಸುದಾರರಿಗೆ ಹಿಂದಿರುಗಿಸಿದ್ದೇವೆ. ಇತ್ತೀಚೆಗೆ ಪತ್ತೆ ಮಾಡಿ ವಶಕ್ಕೆ ಪಡೆಯಲಾದ 82 ಮೊಬೈಲ್‌ಗಳನ್ನು ಮಾಲೀಕರಿಗೆ ಹಿಂದಿರುಗಿಸುತ್ತಿದ್ದೇವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ ಎಸ್ ನೇಮಗೌಡ ಮಾಹಿತಿ ನೀಡಿದರು.

ಶನಿವಾರ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಇದುವರೆಗೆ ಜಿಲ್ಲೆಯಲ್ಲಿ ಒಟ್ಟೂ 1506 ಮೊಬೈಲ್ ಕಳೆದುಹೋದ ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ ಒಟ್ಟೂ 476 ಮೊಬೈಲ್‌ಗಳನ್ನು ಪತ್ತೆಮಾಡಿ ವಾರಸುದಾರರಿಗೆ ಹಿಂದಿರುಗಿಸಲಾಗಿದ್ದು, ಮೊಬೈಲ್‌ಗಳ ಒಟ್ಟೂ ಮೌಲ್ಯ 12 ಲಕ್ಷ 11 ಸಾವಿರ ರೂ ಆಗಿದೆ ಎಂದರು.

ನಗರದ ಟೌನ್ ಪೊಲೀಸ್ ಸ್ಟೇಷನ್-3, ರೂರಲ್-5, ಬೆಟಗೇರಿ-2, ಲಕ್ಷ್ಮೇಶ್ವರ-3, ಶಿರಹಟ್ಟಿ-3, ನರಗುಂದ-5, ರೋಣ-8, ಗಜೇಂದ್ರಗಡ-4, ಮುಂಡರಗಿ-10 ನರೇಗಲ್-1, ಸಿಇಎನ್ ಠಾಣೆ-6, ಟೆಕ್ ಸೆಲ್-28 ಸೇರಿದಂತೆ ಒಟ್ಟು 12 ಲಕ್ಷ 11ಸಾವಿರ ಬೆಲೆಬಾಳುವ 82 ಮೊಬೈಲ್‌ಗಳನ್ನು ಇಂದು ಹಸ್ತಾಂತರಿಸಿದ್ದೇವೆ ಎಂದು ವರಿಷ್ಠಾಧಿಕಾರಿಗಳು ಮಾಹಿತಿ ನೀಡಿದರು.

### ಸಕ್ರಿಯ ಕ್ಷಯ ಪತ್ತೆಗೆ 48,372 ಸಾವಿರ ಮನೆಗಳ ಸರ್ವೇ- ಸಿಇಓ ಡಾ. ಸುಶೀಲಾ

## ನಾಳೆಯಿಂದ ಆಗಸ್ಟ್ 2 ರವರೆಗೆ ಆಂದೋಲನ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಾದ್ಯಂತ ಜುಲೈ 17 ರಿಂದ ಆಗಸ್ಟ್ 2 ರವರೆಗೆ ಸಕ್ರಿಯ ಕ್ಷಯ ಪತ್ತೆ ಆಂದೋಲನ ಜರುಗಲಿದ್ದು, ಆಂದೋಲನದ ಯಶಸ್ಸಿಗೆ ವಿವಿಧ ಇಲಾಖೆ ಅಧಿಕಾರಿಗಳ ಸಹಕಾರ ಅಗತ್ಯ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಸುಶೀಲಾ ಬಿ ತಿಳಿಸಿದರು.

ಗದಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯದಲ್ಲಿ ಶನಿವಾರದಂದು ಜರುಗಿದ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.


ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಅರುಂಧತಿ ಕೆ ಅವರು ಮಾತನಾಡಿ ಜಿಲ್ಲೆಯಾದ್ಯಂತ ಈ ಆಂದೋಲನದಲ್ಲಿ ಒಟ್ಟು 48,372 ಮನೆಗಳನ್ನು ಗುರುತಿಸಿದ್ದು, ಇದರಲ್ಲಿ 363 ತಂಡದೊಂದಿಗೆ ಮನೆ ಮನೆ ಸಮೀಕ್ಷೆ ನಡೆಸಿ ಸಂಶಯಾಸ್ಪದ ರೋಗಿಗಳನ್ನು ಕಂಡುಹಿಡಿಯಲಾಗುತ್ತಿದೆ .

ಕ್ಷಯರೋಗಿಗಳನ್ನು ಮನೆ ಮನೆ ಸರ್ವೇ ಮೂಲಕ ಪತ್ತೆ ಹಚ್ಚುವುದು ಒಂದು ಭಾಗವಾದರೆ ವರ್ಷವಿಡಿ ಸರ್ಕಾರಿ, ಖಾಸಗಿ ಆಸ್ಪತ್ರೆಗಳಿಗೆ ▶▶3 ನೇ ಪುಟಕ್ಕೆ

## ದಿಂಗಾಲೇಶ್ವರ ಸ್ವಾಮೀಜಿಗೆ ರಕ್ಷಣೆ ನೀಡಿ: ಭಕ್ತರಿಂದ ದೂರು

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಸಮಾಜಮುಖಿ ಮಠಾಧಿಪತಿಗಳ ರಕ್ಷಣೆ ಸರಕಾರದ ಹೊಣೆಯಾಗಿದ್ದು, ಶಿರಹಟ್ಟಿಯ ಜ.ಫಕೀರೇಶ್ವರ ಸಂಸ್ಥಾನಮಠದ ಉತ್ತರಾಧಿಕಾರಿ ಜ.ಫ.ದಿಂಗಾಲೇಶ್ವರ ಸ್ವಾಮೀಜಿಗೆ ರಕ್ಷಣೆ ನೀಡುವಂತೆ ಅವರ ಭಕ್ತರ ಪರವಾಗಿ ವೀರಬಸವ ದೇವರು ಶಿರಹಟ್ಟಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.



ದೂರಿನ ವಿವರ: ಜ.ಫಕೀರೇಶ್ವರ ಮಠದಲ್ಲಿ ದಿಂಗಾಲೇಶ್ವರ ಸ್ವಾಮೀಜಿ ವಾಸ ಮಾಡುವ ಸನ್ನಿಧಿ ಕಟ್ಟಡದ 2ನೇ ಅಂತಸ್ತಿನ ಮೇಲೆ ಜು.12ರಂದು ಮೂವರು ಅಪರಿಚಿತರು ತಡರಾತ್ರಿ ಮಠದ ಹಿಂದಿನ ಭಾಗದಿಂದ ಕಾಂಪೌಂಡ್ ▶▶3 ನೇ ಪುಟಕ್ಕೆ

## ಮಹಿಳೆಯ ಸ್ವಾವಲಂಬಿ ಬದುಕಿಗೆ ನರೇಗಾ ಆಸರೆ

■ ವಿಜಯಸಾಕ್ಷಿ ಸುದ್ದಿ, ರೋಣ

ಮಹಿಳೆಯರ ಸ್ವಾವಲಂಬನೆ ಹಾಗೂ ಸ್ವಾತಂತ್ರ್ಯ ಬದುಕಿಗೆ ನರೇಗಾ ಆಸರೆ ಆಗಿದ್ದು, ನಿಮ್ಮ ಗ್ರಾಮ ಪಂಚಾಯತಿಗೆ ನಮೂನೆ - 6 ಅನ್ನು ಸಲ್ಲಿಸುವ ಮೂಲಕ ಕೆಲಸವನ್ನು ಪಡೆದುಕೊಂಡು ಆರ್ಥಿಕವಾಗಿ ಸದೃಡರಾಗಿ ಸ್ವಾವಲಂಬನೆಯ ಬದುಕನ್ನು ಸಾಗಿಸಿ ಅಂತಾ ಜಿಲ್ಲಾ ಪಂಚಾಯತ ಸಹಾಯಕ ಜಿಲ್ಲಾ ಕಾರ್ಯಕ್ರಮ ಸಂಯೋಜಕ ಕಿರಣಕುಮಾರ ಎಸ್.ಎಚ್ ಹೇಳಿದರು.



ತಾಲೂಕಿನ ಕುರುಡಗಿ ಗ್ರಾಮದಲ್ಲಿ ನಡೆದ ಮಹಿಳಾ ಸ್ನೇಹಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ನರೇಗಾ ಯೋಜನೆಯಡಿ ಪ್ರತಿ ಕುಟುಂಬಕ್ಕೆ ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಖಾತರಿಯ ಕೂಲಿ ಉದ್ಯೋಗವನ್ನು ಒದಗಿಸುವ ಮೂಲಕ ಗ್ರಾಮೀಣ ಜನರ ಆರ್ಥಿಕ ಜೀವನವನ್ನು ಮಹತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯು ಜೀವನೋಪಾಯದ ಭದ್ರತೆ ನೀಡುತ್ತದೆ. ಕೌಶಲ್ಯ ರಹಿತ ಕೆಲಸ ಮಾಡಲು ಮಹಿಳೆಯರು ಸ್ವಯಂ ಪ್ರೇರಣೆಯಿಂದ ಮುಂದೆ ಬರಬೇಕು, ಅಳತೆ ಪ್ರಕಾರ ಕೆಲಸ ಮಾಡಿದರೆ ಪ್ರತಿ ದಿನ 316 ರೂ. ಪಾವತಿಸಲಾಗುತ್ತದೆ. ಪ್ರತಿ ಎನ್‌ಎಂಆರ್‌ನಲ್ಲಿ ಕಡ್ಡಾಯವಾಗಿ ಶೇ. 60ರಷ್ಟು ಮಹಿಳೆಯರು ಇರುವಂತೆ ಬಿಎಫ್‌ಟಿ, ಡಿಇಒ, ಜಿಕೆಎಮ್, ಕ್ರಮ ವಹಿಸಿ ಮಹಿಳಾ ಪಾಲ್ಗೊಳ್ಳುವಿಕೆ ▶▶3 ನೇ ಪುಟಕ್ಕೆ

## ಶರಣ ಸಂಗಮ ಕಾರ್ಯಕ್ರಮ ಇಂದು



■ ವಿಜಯಸಾಕ್ಷಿ ಸುದ್ದಿ, ಗದಗ

ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 11ಕ್ಕೆ ನಡೆಯಲಿರುವ ಬಸವದಳದ 1550ನೇ ಶರಣ ಸಂಗಮದಲ್ಲಿ 'ಡಾ. ಫ ಗು ಹಳಕಟ್ಟಿಯವರ 143ನೇ ಜಯಂತಿ ಹಾಗೂ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳವರ 28ನೇ ಸ್ಮರಣೆ' ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ಬಸವದಳದ ಅಧ್ಯಕ್ಷ ಶರಣ ವಿ ಕೆ ಕರೇಗೌಡ್ರ ವಹಿಸುವರು. 'ಡಾ. ಫ ಗು ಹಳಕಟ್ಟಿಯವರ ಕುರಿತು ಶರಣ ಚಿಂತಕ ಅಶೋಕ ಬ ಬರಗುಂಡಿ ಮತ್ತು ಹಾಗೂ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳವರ ಕುರಿತು ಶರಣ ಬಸವಣ್ಣೆಪ್ಪ ವಿ ಕಾಮಣ್ಣವರ ಇವರು ಉಪನ್ಯಾಸ ಮಾಡುವರು.

ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿ ವಿನಂತಿಸಿದ್ದಾರೆ.

## ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮುಂಡರಗಿ ತಾಲೂಕಿನಲ್ಲಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದ ಪ್ರವೇಶಕ್ಕೆ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್ ಹಾಗೂ ಪಾರ್ಸಿ ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು.

ಸದರಿ ಅರ್ಜಿ ಸಲ್ಲಿಸುವ ದಿನಾಂಕವನ್ನು ಜುಲೈ 20 ರವರೆಗೆ ವಿಸ್ತರಿಸಲಾಗಿದೆ.

ವಿದ್ಯಾರ್ಥಿಗಳು https://shp.karnataka.gov.in ಮೂಲಕ ಅರ್ಜಿಗಳನ್ನು ಸಲ್ಲಿಸಿ ಸದರಿ ಅರ್ಜಿ ಪ್ರತಿಯನ್ನು ಎಲ್ಲಾ ದಾಖಲೆಗಳ ಝರಾಕ್ಸ್ ಪ್ರತಿಗಳೊಂದಿಗೆ ಆಯಾ ತಾಲೂಕು ಮಾಹಿತಿ ಕೇಂದ್ರಗಳ ಕಛೇರಿಯಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂ.ಸಂ ಹಾಗೂ ವಿಳಾಸ ಕೆಳಗಿನಂತಿವೆ – 08371-262911 ತಾಲೂಕ ಪಂಚಾಯತಿ ಆವರಣ, ಮುಂಡರಗಿ ; 08372-297494 ಮೌಲಾನಾ ಆಜಾದ್ ಭವನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ; 08381-267258 ತಾಲೂಕ ಪಂಚಾಯತಿ ಆವರಣ, ರೋಣ; 08377-245411 ತಹಸೀಲ್ದಾರ ಕಾರ್ಯಾಲಯ ರೂ.ನಂ:20, ನರಗುಂದ ; 08487-242810 ತಾಲೂಕ ಪಂಚಾಯತ ಹತ್ತಿರ, ಶಿರಹಟ್ಟಿ

## ಕಸಾಪದಿಂದ ಶರೀಫಜ್ಜನ ಸ್ಮರಣೆ, ತತ್ವಪದ ಗೋಷ್ಠಿ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ಸಾಹಿತ್ಯ ಪರಿಷತ್ತು ತಾಲೂಕಾ ಘಟಕ ಗದಗ ವತಿಯಿಂದ ಮನೆ-ಮನಕ್ಕೆ ಕನ್ನಡ ಸಾಹಿತ್ಯ ತಲುಪುವ ಉದ್ದೇಶದಿಂದ ಮತ್ತು ಶರೀಫರ ಸ್ಮರಣೆಗಾಗಿ ಉಪನ್ಯಾಸ ಹಾಗೂ ಸ್ವರಚಿತ ತತ್ವ ಪದಗಳ ಕವಿಗೋಷ್ಠಿಯನ್ನು ನರಸಾಪೂರದ ಖಾದಿ ಪ್ಲಾಟ್, ಗುಂಡು ಮಾರುತಿ ಗುಡಿ ಹತ್ತಿರ ಇರುವ ಕೆ ಜಿ ಹೊನ್ನಾದೇವಿ ಅವರ ಮನೆಯಲ್ಲಿ ಭಾನುವಾರ ಸಂಜೆ 3.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ದೊಡ್ಡಾಟ ಕಲಾವಿದ ಅಶೋಕ ಸುತಾರ ಉದ್ಘಾಟಿಸುವರು. ಜನಪದ



ಕಲಾವಿದ ಗವಿಸಿದ್ದಯ್ಯ ಹಳ್ಳಿಕೇರಿಮಠ ಇವರು 'ಶರೀಫಜ್ಜನ ಜೀವನ ಜೋಕಾಲಿ' ಎಂಬ ವಿಷಯದ ಕುರಿತು ಉಪನ್ಯಾಸ ನೀಡುವರು. ನಿವೃತ್ತ ಕಲಾ ಶಿಕ್ಷಕ ಎ ಎ ಶಿರಹಟ್ಟಿ ಅತಿಥಿಗಳಾಗಿ ಪಾಲ್ಗೊಳ್ಳುವರು. ತಾಲೂಕಾ ಕಸಾಪ ಅಧ್ಯಕ್ಷೆ ಡಾ. ರಶ್ಮಿ ಅಂಗಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ತತ್ವಪದ ಕವಿಗೋಷ್ಠಿಯಲ್ಲಿ ಡಾ. ರಾಜೇಂದ್ರ ಗಡಾದ, ಬಸವರಾಜ ತೋಟಗೇರ, ಮಹಾಂತೇಶ ಮಲ್ಲಾರಿ, ಅಶ್ವಿನಿ ಜೋಶಿ, ಮಹಾಂತೇಶ ಬೀರಗಣ್ಣವರ, ಗಣೇಶ ಬಡಿಗೇರ, ಶಿವಾನಂದ ಭಜಂತ್ರಿ, ಕಳಕಪ್ಪ ಜಲ್ಲಿಗೇರಿ, ಶಿವಲೀಲಾ ಧನ್ನಾ, ಮಧುರಾಜ್ ರಾಂಪೂರ, ಸೌಭಾಗ್ಯ ಆರೇರ್, ಕೆ ಜಿ ಹೊನ್ನಾದೇವಿ ಭಾಗವಿಸಲಿದ್ದಾರೆ ಎಂದು ಕಸಾಪ ಗೌರವ ಕಾರ್ಯದರ್ಶಿಗಳಾದ ಬಸವರಾಜ ನೆಲಜೇರಿ, ಕರಿಬಸಪ್ಪ ಬಾಳಿಕಾಯಿ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

## ಅಂತಾರಾಷ್ಟ್ರೀಯ ಯೋಗ ಚಾಂಪಿಯನ್‌ಶಿಪ್‌ಗೆ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ



ಪಟ್ಟಣದ ಎಸ್‌ಜೆಜೆಎಂ ಪದವಿ ಪೂರ್ವ ಮಾಹಾ ವಿದ್ಯಾಲಯದ ವಿದ್ಯಾರ್ಥಿನಿ ನಮಿತಾ ಗುರಮ್ಮನವರ ಬೆಂಗಳೂರಿನಲ್ಲಿ ಜರುಗಿದ ರಾಷ್ಟ್ರಮಟ್ಟದ ಯೋಗ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ ತೃತೀಯ ಸ್ಥಾನ ಗಳಿಸುವ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಯೋಗ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

ಸಾಧಕ ವಿದ್ಯಾರ್ಥಿನಿ ಹಾಗೂ ತರಬೇತಿ ನೀಡಿದ ಯೋಗ ಗುರು ಪ್ರಕಾಶ ಮದ್ದಿನ ಇವರಿಗೆ ಶಾಲಾ ಆಡಳಿತ ಮಂಡಳಿ, ಶಾಲಾ ಶಿಕ್ಷಕರ ವೃಂದದವರು ಅಭಿನಂದಿಸಿದ್ದಾರೆ.

## ಸಾಕ್ಷಿ ಸುಭಾಷಿತ

**ಲೋಕವೆಂಬುದೊಂದು ಸಂತೆ, ಬೇಕು ಬೇಡಗಳ**
**ಕಂತೆ, ಸಾಕು ನಮಗಾ ಚಿಂತೆ**
**–ಡಿ.ವಿ. ಗುಂಡಣ್ಣ**

## ಸಂಪಾದಕೀಯ

### ಇದು ಕಂದಾಯ ಸಚಿವರು ಹೇಳುವ ಮಾತಲ್ಲ...

ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಮರಳುಗಾರಿಕೆಯನ್ನ ನಿಯಂತ್ರಿಸಲು ಸರ್ಕಾರದಿಂದ ಸಾಧ್ಯವಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಅಸಹಾಯಕತೆ ವ್ಯಕ್ತಪಡಿಸಿರುವುದು ಸೂಜಿಗ ಮೂಡಿಸಿದೆ.

ಈ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಅಕ್ರಮ ಮರಳುಗಾರಿಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಹಿಂದಿನ ಬಿಜೆಪಿ ಸರ್ಕಾರವು ಹೊಸ ಮರಳು ನೀತಿಯನ್ನು ಜಾರಿ ಮಾಡುವ ಚಿಂತನೆ ನಡೆಸಿತ್ತು.

ಅಕ್ರಮ ಮರಳುಗಾರಿಕೆ ನಿಯಂತ್ರಣಕ್ಕೆ ಈ ಹಿಂದಿನ ಸರ್ಕಾರಗಳು ಒಂದಷ್ಟು ಪ್ರಯತ್ನ ನಡೆಸಿದ್ದು ನಿಜ. ಅದರಲ್ಲಿ ಯಶಸ್ವಿ ಆಗಿಲ್ಲ ಎನ್ನುವುದು ಒಪ್ಪಿಕೊಳ್ಳಬೇಕಾದ ಸಂಗತಿ. ಆದರೆ ಅಕ್ರಮ ಮರಳುಗಾರಿಕೆ ತಡೆಯಲು ಸಾಧ್ಯವಿದೆ. ಆದರೆ ಅದಕ್ಕೆ ಇಚ್ಛಾಶಕ್ತಿ ಬೇಕು.

ಅಕ್ರಮ ಮರಳುಗಾರಿಕೆ ಎನ್ನುವುದು ಬಹುದೊಡ್ಡ ದಂಧೆಯಾಗಿ ಬದಲಾಗಿದೆ. ಅನೇಕ ಪ್ರಭಾವಿಗಳು, ರಾಜಕೀಯ ಮುಖಂಡರೇ ಅಕ್ರಮ ಮರಳುಗಾರಿಕೆಯಲ್ಲಿ ತೊಡಗಿದ್ದಾರೆ. ಇಂತಹ ಅಕ್ರಮ ವ್ಯವಹಾರವನ್ನ ತಡೆಯ ಬೇಕಾದ ಅಧಿಕಾರಿಗಳು ಸಹ ಇದರಲ್ಲಿ ಶಾಮೀಲಾಗಿದ್ದಾರೆ. ಅಕ್ರಮ ತಡೆಯಲು ಮುಂದಾಗುವ ಅಧಿಕಾರಿಗಳು ಪ್ರಾಣವನ್ನು ಕಳೆದುಕೊಂಡಿರುವ ಉದಾಹರಣೆಯೂ ಇದೆ.

ಆದರೆ ಅಕ್ರಮ ಮರಳುಗಾರಿಕೆಯನ್ನ ತಡೆಯಲು ಸಾಧ್ಯವಿದೆ. ಸರ್ಕಾರಿ ಸಂಸ್ಥೆಯ ಮೂಲಕವೇ ಮರಳುಗಾರಿಕೆಗೆ ಅವಕಾಶ ನೀಡಿದೆ ಅಕ್ರಮ ಮರಳುಗಾರಿಕೆ ಸಂಪೂರ್ಣವಾಗಿ ಬಂದ್ ಆಗುತ್ತದೆ. ಸರ್ಕಾರ ರಿಯಾಯಿತಿ ದರದಲ್ಲಿ ಮರಳು ಪೂರೈಕೆ ಮಾಡುವಂತಾದರೆ ಮಾತ್ರ ಅಕ್ರಮಕ್ಕೆ ಕಡಿವಾಣ ಹಾಕಲು.

ರಾಜ್ಯದಲ್ಲಿ ಸ್ಪಷ್ಟವಾದ ಮರಳು ನೀತಿ ಇಲ್ಲದ ಕಾರಣ ಮತ್ತು ಮರಳು ಖರೀದಿಗೆ ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ಅಕ್ರಮ ಚಟುವಟಿಕೆ ಮತ್ತಷ್ಟು ಜೋರಾಗಿ ನಡೆಯುತ್ತಿದೆ. ಜನರಿಗೆ ಸುಲಭವಾಗಿ ಮರಳು ದೊರೆಯುವುದು ದುಸ್ತರವಾದರೆ ಅಕ್ರಮ ವ್ಯವಹಾರ ಮತ್ತಷ್ಟು ವ್ಯಾಪಕವಾಗಿ ಬೆಳೆಯುತ್ತದೆ.

ಕಂದಾಯ ಸಚಿವರು ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಮರಳು ಸಿಗುವಂತಹ ವ್ಯವಸ್ಥೆ ಮಾಡಿದಲ್ಲಿ ಮಾತ್ರ ಅಕ್ರಮಕ್ಕೆ ಕಡಿವಾಣ ಹಾಕಲು ಸಾಧ್ಯ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

## ಹಾರಿತು ಇಸ್ರೋದ ಹಕ್ಕಿ



ದೂರದ ಬಾನಂಗಳದಲ್ಲಿ ಹಾರಿತು ಇಸ್ರೋದ ಹಕ್ಕಿ
ನೋಡುಗರ ಕಣ್ಣಿಗೆಲ್ಲ ಬಂತು ಸಂತಸವು ಉಕ್ಕಿ
ಈ ದಿನ ಭಾರತಕ್ಕೆ ಹಬ್ಬದ ವಾತಾವರಣದ ಖುಷಿ
ಎಂದಿಗೂ ಮರೆಯಲಾಗದಂತೆ ಇರಲಿ ಪ್ರೀತಿಯ ಖುಷಿ

ಗಗನದ ಎತ್ತರಕ್ಕೆ ನೀರಿನಂತೆ ಚಿಮ್ಮಿತು ಈ ಹಕ್ಕಿ
ಇದೀಗ ಬಂದಿತು ನಮ್ಮ ಭಾರತಕ್ಕೆ ಆನಂದದ ಲಕ್ಕಿ
ಭೂಮಿಯ ಒಡಲಲ್ಲಿ ಮೂಡಿತು ಒಂದು ಮುತ್ತಿನ ರಾಕಿ
ಭಾರತದ ಕನಸನ್ನು ನನಸಾಗಿಸಲು ಬೇಕಿದೆ ಈ ಇಸ್ರೋದ ಹಕ್ಕಿ

**– ಸಿ ಆರ್ ಗಡಾದ, ಗದಗ.**

# ನಗರೋತ್ಥಾನ ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಸಚಿವ ರಹೀಂಖಾನ್ ಸೂಚನೆ




**■ವಿಜಯಸಾಕ್ಷಿ ಸುದ್ದಿ, ಚಿಕ್ಕಬಳ್ಳಾಪುರ**

ಜಿಲ್ಲೆಯಲ್ಲಿ ನಗರೋತ್ಥಾನ ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಸಮರ್ಪಕವಾಗಿ ವೆಚ್ಚ ಮಾಡಿ, ಯೋಜನೆಯನ್ನು ತ್ವರಿತವಾಗಿ ಜನರಿಗೆ ತಲುಪಿಸಬೇಕು ಎಂದು ಪೌರಾಡಳಿತ ಮತ್ತು ಹಜ್ ಸಚಿವ ರಹೀಂಖಾನ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅವರು ಶನಿವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ "ನಗರೋತ್ಥಾನ ಯೋಜನೆ ಅನುಷ್ಠಾನ ಮತ್ತು ಗಳುಆ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ಪೂರೈಕೆ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅಗತ್ಯ ಸೂಚನೆಗಳನ್ನು ನೀಡಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ನಗರೋತ್ಥಾನ ಯೋಜನೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಗೆ 120 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ. ಈ ಕುರಿತು ಪ್ರಗತಿ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿದೆ, ತ್ವರಿತಗತಿಯಲ್ಲಿ ಕಾಮಗಾರಿಗಳು ಆಗಬೇಕು. ನಗರ ಪ್ರದೇಶಗಳಲ್ಲಿನ ಒಳ ಚರಂಡಿ ವ್ಯವಸ್ಥೆ ಮತ್ತು ಕುಡಿಯುವ ನೀರಿನ ಸಮಸ್ಯೆಗಳ ಪರಿಹಾರಕ್ಕೆ ಹಲವು ಸೂಚನೆಗಳನ್ನು ನೀಡಿದ್ದೇನೆ.

SFC ಮತ್ತು 15ನೇ ಹಣಕಾಸು ಯೋಜನೆಯ ಅನುದಾನದ ಸದ್ಬಳಕೆಗೆ ಕ್ರಮಕೈಗೊಳ್ಳಲು ತಿಳಿಸಿದ್ದೇನೆ. ಒಟ್ಟಾರೆ ನೂತನ ಸರ್ಕಾರದ ಆಶಯದಂತೆ ಜನರಿಗೆ ತ್ವರಿತ ಆಡಳಿತ, ತ್ವರಿತ ಸೇವೆ ನೀಡಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಪೌರಾಡಳಿತ ಇಲಾಖೆಯ ನಿರ್ದೇಶಕಿ ಮಂಜುಶ್ರೀ, ಜಿಲ್ಲಾಧಿಕಾರಿ ಪಿ.ಎನ್ ರವೀಂದ್ರ, ಗೌರಿಬಿದನೂರು ವಿದಾನಸಭಾ ಕ್ಷೇತ್ರದ ಶಾಸಕ ಪುಟ್ಟಸ್ವಾಮಿ ಗೌಡ, ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಶಾಸಕ ರವಿ ಕುಮಾರ್, ನಗರಸಭೆ ಆಯುಕ್ತೆ ಪಂಪಾಶ್ರೀ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು,



ಶನಿವಾರ ಶಿರಹಟ್ಟಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಬಸ್‌ನಿಲ್ದಾಣ ರಸ್ತೆ ಮತ್ತು ಮಾರುಕಟ್ಟೆ ರಸ್ತೆಯಲ್ಲಿರು ಅಂಗಡಿಗಳಿಗೆ ಆರೋಗ್ಯ ನಿರೀಕ್ಷಕ ನೀಲೇಶ ಹಾದಿಮನಿ ನೇತೃತ್ವದಲ್ಲಿ ದಾಳಿ ನಡೆಸಿ, ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್, ಕ್ಯಾರಿಬ್ಯಾಗ್ ಹಾಗೂ 60 ಕೆಜಿ ಪ್ಲಾಸ್ಟಿಕ್ ಸಾಮಗ್ರಿಗಳನ್ನು ವಶಪಡಿಸಿಕೊಂಡು ದಂಡ ವಿಧಿಸಲಾಯಿತು. ಈ ಸಂದರ್ಭದಲ್ಲಿ ಪೌರಕಾರ್ಮಿಕ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಕೃಷಿ ಇಲಾಖೆಯ ಯೋಜನೆಗಳ ಪ್ರಯೋಜನ ಪಡೆಯಿರಿ

**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಕೃಷಿ ಇಲಾಖೆಯಲ್ಲಿ ರೈತರಿಗಾಗಿ ಹಲವಾರು ಯೋಜನೆಗಳಿವೆ. ಅವುಗಳನ್ನು ಪ್ರತಿಯೊಬ್ಬ ರೈತರೂ ಸದುಪಯೋಗಪಡಿಸಿಕೊಳ್ಳಬೇಕು ಎಂದು ಮುಳಗುಂದ ಕೃಷಿ ಸಹಾಯಕ ಅಧಿಕಾರಿ ಎಫ್ ಸಿ ಗುರಿಕಾರ ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆಯ ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮ



ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು.

ಭೂ ಸಂಪನ್ಮೂಲ ಮಾಹಿತಿ ಆಧರಿಸಿ ಮಣ್ಣು ಮತ್ತು ನೀರು ಸಂರಕ್ಷಣೆಗಾಗಿ ಸಮಗ್ರ ಯೋಜನೆಯನ್ನು ಕೃಷಿ ಇಲಾಖೆ ಹಮ್ಮಿಕೊಂಡಿದ್ದು, ರೈತರ ಜಮೀನಿನಲ್ಲಿ ಕೃಷಿ ಹೊಂಡ, ಬದುಗಳ ನಿರ್ಮಾಣ, ಮಣ್ಣು ಪರೀಕ್ಷೆ, ಮಣ್ಣಿನ ಗುಣಧರ್ಮ, ಬೆಳೆ, ಮಾರುಕಟ್ಟೆ, ಕೃಷಿ ಸುರಕ್ಷತೆಗಾಗಿ ನವೀನ ಅಭಿವೃದ್ಧಿಯ ಮೂಲಕ ಜಲಾಯನ ಪ್ರದೇಶಗಳನ್ನು ಪುನಶ್ಚೇತನಗೊಳಿಸುವುದರ ಮೂಲಕ ರೈತರನ್ನು ಆರ್ಥಿಕವಾಗಿ ಸದೃಢಗೊಳಿಸುವ ಉದ್ದೇಶ ಹೊಂದಲಾಗಿದೆ ಎಂದರು.

ಬಿ ವಿ ಸುಂಕಾಪೂರ, ಕೆ ಎಂ ಹೆರಕಲ್ಲ, ಎಂ ಎಂ ಕೊಪ್ಪಳ. ಶೇಖರ ನಾಯಕ್, ಮಂಜುನಾಥ ಬ್ಯಾಳಿ, ಕಾಶಿಮ್ ಹಾದಿಮನಿ, ಮಂಜುನಾಥ ಕರಿಗಾರ, ದ್ರಾಕ್ಷಾಯಣಿ ಕುರ್ತಕೋಟಿ, ಶಶಿಧರ ನವಲಿ, ಮುತ್ತಪ್ಪ ಪಲ್ಲೇದ, ಮಂಜುನಾಥ ಕಮಡೊಳ್ಳಿ, ಈಶ್ವರ ಕತ್ತಿ, ಮುನ್ನಾ ಖಾಜಿ ಮುಂತಾದವರಿದ್ದರು.

# ರೋಗ ಬಾರದಂತೆ ಮುಂಜಾಗೃತೆ ಅಗತ್ಯ

**■ವಿಜಯಸಾಕ್ಷಿ ಸುದ್ದಿ, ಗದಗ**

ರೋಗ ಬಂದನಂತರ ಚಿಕಿತ್ಸೆ ಪಡೆಯುವುದಕ್ಕಿಂತ ರೋಗ ಬರದಂತೆ ಮುಂಜಾಗ್ರತೆ ವಹಿಸುವುದು ಮುಖ್ಯವಾಗಿದೆ ಎಂದು ರೋ. ಡಾ. ಶೇಖರ ಸಜ್ಜನರ ಅಭಿಪ್ರಾಯಪಟ್ಟರು.

ಸ್ಥಳೀಯ ಕೆ.ಎಲ್.ಇ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗದಗ, ಇನ್ನರ್‌ವ್ಹೀಲ್ ಕ್ಲಬ್ ಗದಗ-ಬೆಟಗೇರಿ, ಕೆ.ಎಲ್.ಇ ಚಿರಾಯು ಹಾಗೂ ಎಚ್.ಸಿ.ಜಿ.ಎನ್.ಎಮ್.ಆರ್ ಕ್ಯಾನ್ಸರ್ ಸೆಂಟರ್ ಇವರ ಸಹಯೋಗದೊಂದಿಗೆ ಉಚಿತ ಹೃದಯ ಮತ್ತು ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಮಹಾವಿದ್ಯಾಲಯದಲ್ಲಿ ಇನ್ನರ್‌ವ್ಹೀಲ್ ಸುವರ್ಣ ಮಹೋತ್ಸವದ ಅಂಗವಾಗಿ ಜರುಗಿದ ಕಾರ್ಯಕ್ರಮದಲ್ಲಿ ಅವರ ಮಾತನಾಡಿದರು.

ಭಾರತದ ಜನಸಂಖ್ಯೆ ಹೆಚ್ಚುತ್ತಿದ್ದಂತೆ ವೈದ್ಯರ ಕೊರತೆ ತೀವ್ರ ಹೆಚ್ಚಾಗುತ್ತಿದೆ. ರೋಗ ಬರುವುದಕ್ಕಿಂತ ಮೊದಲು ಅದನ್ನು ತಡೆಗಟ್ಟುವುದು ಹೆಚ್ಚು ಸೂಕ್ತವೆಂದರು.



ಅಲ್ಲದೇ ಮನೆಮದ್ದು, ಪಾರಂಪರಿಕ ಮನೆ ಔಷದಿ ವಸ್ತುಗಳನ್ನು ಹೆಚ್ಚು ಬಳಸಿ ಧ್ಯಾನ ಮತ್ತು ಯೋಗಾಭ್ಯಾಸದಿಂದ ರೋಗಗಳನ್ನು ನಿಯಂತ್ರಿಸಬಹುದು ಎಂದು ಹೇಳಿದರು.

ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. ಎಂ.ಬಿ.ಕೊಳವಿ ಮಾತನಾಡಿ, ಇಂದಿನ ಅವಸರದ ಜಗತ್ತು, ಕೆಲಸದ ಒತ್ತಡ, ಉದ್ವೇಗದ ಮನಸ್ಸು, ಹೃದಯ ತೊಂದರೆಗಳಿಗೆ ಎಡೆ ಮಾಡುತ್ತಿದೆ. ಸದೃಢ ಭಾರತ ನಿರ್ಮಾಣವಾಗಲು ದೇಶೀಯ ಆಹಾರಗಳ ಸೇವನೆ ಹೆಚ್ಚು ಸೂಕ್ತವೆಂದರು. ಅದೇ ರೀತಿ ಜಂಕ್ ಫುಡ್ ಮತ್ತು ಬೀದಿ ಬದಿಯ ಆಹಾರಗಳನ್ನು, ಸಿದ್ಧ ಆಹಾರಗಳನ್ನು ಕಡಿಮೆ ಸೇವನೆ ಮಾಡಿ ಕ್ಯಾನ್ಸರ್‌ದಂತಹ ರೋಗಗಳಿಂದ ದೂರವಿರಬೇಕೆಂದು ಕರೆ ನೀಡಿದರು.

ಇನ್ನರ್‌ವ್ಹೀಲ್ ಕ್ಲಬ್‌ನ ಅಧ್ಯಕ್ಷರು ಮತ್ತು ಮಹಾವಿದ್ಯಾಲಯದ ಸ್ಥಾನಿಕ ಆಡಳಿತ ಮಂಡಳಿಯ ಚೇರಮನ್ ರಜನಿ ಪಾಟೀಲ ಸರ್ವರನ್ನು ಸ್ವಾಗತಿಸಿದರು. ಸದಸ್ಯರಾದ ದೀಪಾ ಪಟ್ಟಣಶೆಟ್ಟಿ ಇನ್ನರ್‌ವ್ಹೀಲ್ ಪ್ರಾರ್ಥನೆಗೈದರು. ಶಿಬಿರದ ಛೇರ್ಮನ್ನರಾದ ಡಾ. ನಾಗರತ್ನ ಕಲ್ಲೊಳಗಿ ವಿವಿಧ ಪ್ರತಿಷ್ಠಿತ ಆಸ್ಪತ್ರೆಗಳಿಂದ ಬಂದ ತಜ್ಞ ವೈದ್ಯರುಗಳಾದ ಕ್ಯಾನ್ಸರ್ ತಜ್ಞರು ಡಾ. ರುದ್ರೇಶ ತಬಾಲಿ, ಹೃದಯ ತಜ್ಞರಾದ ಅಮೀತ ಜಿ. ಸತ್ತೂರ ಮತ್ತು ಸಿ.ಟಿ.ವಿ.ಎಸ್ ತಜ್ಞರಾದ ಡಾ. ಶರಣ್ ಡಿ. ಹಳ್ಳದ ಇವರುಗಳನ್ನು ಸಭೆಗೆ ಪರಿಚಯಿಸಿದರು. ಇನ್ನರ್‌ವ್ಹೀಲ್ ಕ್ಲಬ್‌ನ ಕಾರ್ಯದರ್ಶಿಗಳಾದ ಶ್ರೀಮತಿ ಹೇಮಲತಾ ಪುಂಗಲಿಯಾ ಕಾರ್ಯಕ್ರಮವನ್ನು ನಿರೂಪಿಸಿದರು. ವೇದಿಕೆಯ ಮೇಲೆ ಪಿ.ಡಿ.ಸಿ ಶ್ರೀಮತಿ ಪ್ರೇಮಾ ಗುಳಗೌಡರ, ಶಿಬಿರದ ಕಾರ್ಯದರ್ಶಿಗಳಾದ ಶ್ರೀಮತಿ ಸುಶೀಲಾ ಭಾಗಮಾರ ಉಪಸ್ಥಿತರಿದ್ದರು.

ಶಿಬಿರದಲ್ಲಿ ಕ್ಲಬ್ಬಿನ ಹಿರಿಯರಾದ ಶ್ರೀಮತಿ ರಾಜೇಶ್ವರಿ ಬಳ್ಳಾರಿ, ಶ್ರೀಮತಿ ಸರೋಜಾ ಆಲೂರು, ಶ್ರೀಮತಿ ಶ್ರೇಯಾ ಪವಾಡಶೆಟ್ಟರ್, ಶ್ರೀಮತಿ ಜ್ಯೋತಿ ಭರಮಗೌಡರ, ಶ್ರೀಮತಿ ಮೀನಾಕ್ಷಿ ಸಜ್ಜನರ, ಶ್ರೀಮತಿ ವಿಜಯಲಕ್ಷ್ಮೀ ಮಾನ್ವಿ, ಶ್ರೀಮತಿ ಸುಶೀಲಾ ಕೋಟೆ, ಶ್ರೀಮತಿ ನಾಗರತ್ನ ಮಾರನಬಸರಿ, ಶ್ರೀಮತಿ ಸಾಗರಿಕಾ ಅಕ್ಕಿ, ಶ್ರೀಮತಿ ಶಾಂತಾ ಮುಂದಿನಮನಿ, ಶ್ರೀಮತಿ ಜಯಶ್ರೀ ಪಾಟೀಲ, ಶ್ರೀಮತಿ ರೇಣುಕಾ ಅಮಾತ್ಯ, ಶ್ರೀಮತಿ ಸುಮಾ ಪಾಟೀಲ, ಶ್ರೀಮತಿ ಶಾಂತ ನಿಂಬಣ್ಣವರ, ಶ್ರೀಮತಿ ಪ್ರಿಯಾಂಕ ಹಳ್ಳಿ, ಶ್ರೀಮತಿ ವೀಣಾ ಕಾವೇರಿ ಮತ್ತು ಕ್ಲಬ್ಬಿನ ಎಲ್ಲ ಸರ್ವಸದಸ್ಯರು ಉಪಸ್ಥಿತರಿದ್ದರು.

ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಜಯಶ್ರೀ ಹುಬ್ಬಳ್ಳಿ ಮತ್ತು ಶ್ರೀಮತಿ ಇಂದುಮತಿ ಅಂಗಡಿ ಉಪಸ್ಥಿತರಿದ್ದರು. ಮಹಾವಿದ್ಯಾಲಯದ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ ವೃಂದದವರು ಹಾಜರಿದ್ದರು. ಸುಮಾರು 220ಕ್ಕಿಂತ ಹೆಚ್ಚು ಜನ ಉಚಿತ ಹೃದಯ ಮತ್ತು ಕ್ಯಾನ್ಸರ್ ತಪಾಸಣಾ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು.

## ಕೆವಿ ಹಂಚಿನಾಳ ಫೌಂಡೇಶನ್‌ನಿಂದ ಆರೋಗ್ಯ ಜಾಗೃತಿ ಅಭಿಯಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಕೆ ವಿ ಹಂಚಿನಾಳ ಫೌಂಡೇಶನ್ ವತಿಯಿಂದ ಲಕ್ಕುಂಡಿ ಗ್ರಾಮದಲ್ಲಿ ಶನಿವಾರ ಬಿ ಎಚ್ ಪಾಟೀಲ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪಿಯುಸಿ ನಂತರದ ಮುಂದಿನ ಶಿಕ್ಷಣದ ಆಯ್ಕೆಗಳು ಮತ್ತು ಆರೋಗ್ಯ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಯಿತು. ಈ ಸಂಧರ್ಭದಲ್ಲಿ ಮಾತನಾಡಿದ ಡಾ॥ ವೀರೇಶ್ ಹಂಚಿನಾಳ, ಕಾಲೇಜಿನ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ, ಸುಚಿತ್ವ , ಸಾಂಕ್ರಾಮಿಕ ರೋಗಗಳ ಕುರಿತು ಸ್ವ ವಿಸ್ತಾರವಾದ



ಮಾಹಿತಿ ನೀಡಿದರು. ಜೊತೆಗೆ ಇಂದಿನ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಕುರಿತು ವಿದ್ಯಾರ್ಥಿ ಪ್ರಶ್ನೆಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಬಿ ಎಚ್ ಪಾಟೀಲ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಂಶುಪಾಲ ಬಸವನಗೌಡ ಪಾಟೀಲ್, ಮಾರುತಿ ಕಂಪ್ಲಿ, ಸಿಬ್ಬಂದಿಗಳು ಸೇರಿದಂತೆ ವಿದ್ಯಾಲಯದ ವಿದ್ಯಾರ್ಥಿಗಳು ಹಾಜರಿದ್ದರು.

# ಜಿಲ್ಲಾ ಪಂಚಾಯಿತಿಯಿಂದ ನರೇಗಾದಡಿ ವೈಯಕ್ತಿಕ ಸೌಲಭ್ಯಕ್ಕೆ ಕರೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯ ಶಿರಹಟ್ಟಿ ತಾಲೂಕಿನ ಮಜ್ಜೂರು ಗ್ರಾಮದಲ್ಲಿ ಜುಲೈ 15 ಶನಿವಾರದಂದು ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಗಾಗಿ ಅಭಿಯಾನ ಆಯೋಜನೆ ಮಾಡಲಾಗಿತ್ತು.

ಗದಗ ಜಿಲ್ಲಾ ಪಂಚಾಯತಿ ವತಿಯಿಂದ ನರೇಗಾ ಯೋಜನೆಯಡಿ ಮಹಿಳಾ ಉದ್ಯೋಗ ಸಬಲೀಕರಣಕ್ಕಾಗಿ ನರೇಗಾ ಯೋಜನೆಯಡಿ ಈವರೆಗೂ ಜಿಲ್ಲೆಯ ಒಟ್ಟಾರೆ ಮಾನವ ದಿನಗಳ ಸೃಜನೆಯಲ್ಲಿ ಮಹಿಳೆಯರ ಪಾಲು ಶೇಕಡ 47. 96 ರಷ್ಟಾಗಿದ್ದು ಆಯುಕ್ತಾಲಯದ ನಿರ್ದೇಶನದಂತೆ ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಕ್ಷೇತ್ರ ಭೇಟಿ ಅಭಿಯಾನದ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಪಂಚಾಯತಿ ನರೇಗಾ ವಿಭಾಗದಿಂದ ಶಿರಹಟ್ಟಿ ತಾಲೂಕು ಮಜ್ಜೂರು ಗ್ರಾಮ ಪಂಚಾಯತಿಯಲ್ಲಿ ಮಹಿಳಾ ಭಾಗವಹಿಸುವಿಕೆ ಪ್ರಮಾಣ (43.92) ಕಡಿಮೆ ಇರುವುದರಿಂದ ವಿಶೇಷ ಮಹಿಳಾ ಸಭೆಯನ್ನು ಆಯೋಜಿಸಲಾಯಿತು, ಸಭೆಯಲ್ಲಿ ಜಿಲ್ಲಾ ಐ.ಇ.ಸಿ ಸಂಯೋಜಕರು ಮಹಿಳಾ ಕೂಲಿ ಕಾರ್ಮಿಕರರನ್ನು ಉದ್ದೇಶಿಸಿ ಯೋಜನೆಯಡಿ ಭಾಗವಹಿಸುವಿಕೆಯ ಕುರಿತಾಗಿ ಇರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ನಂತರ ಮಹಿಳಾ ಕೂಲಿಕಾರರ ಪಾಲ್ಗೊಳ್ಳುವಿಕೆಗೆ ಅನೇಕ ಸಲಹೆ ಸೂಚನೆಗಳನ್ನು ನೀಡಿದರು.

ಒಟ್ಟಾರೆ ಈ ಗ್ರಾಮದಲ್ಲಿ 18 ಕ್ರಿಯಾಶೀಲ ಸ್ವ-ಸಹಾಯ ಸಂಘಗಳಿದ್ದು ಸಂಘದ ಸದಸ್ಯರಿಗೆ ನರೇಗಾ ಯೋಜನೆಯ ವೈಯಕ್ತಿಕ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ಗ್ರಾಮ ಪಂಚಾಯತ ಅಧ್ಯಕ್ಷ ಪ್ರಭು ಲಮಾಣಿ ತಿಳಿಸಿದರು.

ಗ್ರಾಮ ಪಂಚಾಯತಿಗಳಿಗೆ ಭೇಟಿ



ನೀಡಿದ ಜಿಲ್ಲಾ ಪಂಚಾಯತ ನರೇಗಾ ತಂಡ ಯೋಜನೆಯಡಿ ಮಹಿಳೆಯರ ಭಾಗವಹಿಸುವಿಕೆಗೆ ಇರುವ ಸಮಸ್ಯೆಗಳ ಕುರಿತು ಸ್ಥಳೀಯ ಕೂಲಿಕಾರ ಸಂಘಟನೆ, ಸ್ವ-ಸಹಾಯ ಸಂಘಗಳ ಸದಸ್ಯರು ಹಾಗೂ ಕಾಯಕ ಬಂಧುಗಳೊಂದಿಗೆ ಚರ್ಚಿಸಿ ಗ್ರಾಮ ಪಂಚಾಯತಿಯು ಕನಿಷ್ಠ ಪ್ರಗತಿ ಸಾಧಿಸಲು ಸಕಾರಣ ತಿಳಿದು ಮಹಿಳಾ ಭಾಗವಹಿಸುವಿಕೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಸಕ್ರಿಯ ಮಹಿಳಾ ಖಉೂಉ, ಉಕಐಈ, ಒಃಏ ಗಳ ಪಾತ್ರ ಬಹು ಮುಖ್ಯವಾಗಿರುತ್ತದೆ ಎಂಬುದನ್ನು ಅರಿವು ಮೂಡಿಸಲಾಗುತ್ತಿದೆ.

ಕೆಲಸ ಬಯಸುವ ಕುಟುಂಬಗಳು ನಮೂನೆ – 6 ರ ಮೂಲಕ ಅರ್ಜಿಸಲ್ಲಿಸಿ ಕೂಲಿ ಕೆಲಸ ಪಡೆಯುವುದು, ಸಮುದಾಯ ಹಾಗೂ ವೈಯಕ್ತಿಕ ಕಾಮಗಾರಿಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಲಾಗುತ್ತಿದ್ದು, ಪುರುಷರಷ್ಟೇ ಮಹಿಳೆಯರಿಗೆ ಸಮಾನ ವೇತನ ಪ್ರತಿ ದಿನಕ್ಕೆ ಗರಿಷ್ಟ ರೂ.316/– ಕೂಲಿ ನಿಗದಿಪಡಿಸಲಾಗಿರುತ್ತದೆ, ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಹೆಚ್ಚು ಮಹಿಳಾ ಕಾಯಕ ಬಂಧುಗಳನ್ನು ನೇಮಕ ಮಾಡಿ ಕ್ಷೇತ್ರ ಮಟ್ಟದಲ್ಲಿ ಕಾರ್ಯ ಪ್ರವೃತ್ತವಾಗಲು ಕ್ರಮವಹಿಸಲಾಗುತ್ತಿದೆ.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷರು, ಸದಸ್ಯರು ಹಾಗೂ ಜಿಲ್ಲಾ ಪಂಚಾಯತ ಮತ್ತು ತಾಲೂಕು ಪಂಚಾಯತ ನರೇಗಾ ತಂಡ ಮತ್ತು ಪಿಡಿಓ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳು, ಓಖಐಒ ತಂಡ, ಮಹಿಳಾ ಸದಸ್ಯರು, ಮಹಿಳಾ ಕೂಲಿಕಾರರು ಹಾಜರಿದ್ದರು.

**ಆಷಾಢ ಮಾಸದ ಪೂಜೆ, ಧರ್ಮ ಜಾಗೃತಿ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು**

# ನಿಯತ್ತಿನ ಬದುಕಿನಿಂದಲೇ ಶ್ರೇಯಸ್ಸು



**■ವಿಜಯಸಾಕ್ಷಿ ಸುದ್ದಿ, ತಿಪಟೂರು**

ಮನುಷ್ಯ ಜೀವನದಲ್ಲಿ ಉನ್ನತಿ ಕಾಣಲು ಗೊತ್ತು ಗುರಿಗಳಿರಬೇಕು. ಗುರಿ ಇಲ್ಲದ ಮತ್ತು ಗುರು ಇಲ್ಲದ ಜೀವನ ವ್ಯರ್ಥ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ನಗರದ ಶ್ರೀ ಗುರುಲೀಲಾ ಕಲ್ಯಾಣ ಮಂಟಪದಲ್ಲಿ ಜರುಗಿದ ಆಷಾಢ ಮಾಸದ ಪೂಜಾ ಹಾಗೂ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಅಶೀರ್ವಚನ ನೀಡುತ್ತಿದ್ದರು.

ಮನುಷ್ಯ ಜೀವನದಲ್ಲಿ ಸಾಧಿಸುವ ಛಲ ಹೊಂದಿದ್ದಾನೆ. ಮನುಷ್ಯ ನೀರು ಶುದ್ಧಿ, ಗಾಳಿ ಶುದ್ಧಿ ಮಾಡುವುದನ್ನೂ ಕಲಿತ. ಆದರೆ ತನ್ನನ್ನು ತಾನು ತಿದ್ದಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಎಷ್ಟೇ ದೊಡ್ಡ ವ್ಯಕ್ತಿಯಾದರೂ ಕೊಟ್ಟ ಮಾತು, ಇಟ್ಟ ನಂಬಿಕೆ ಸುಳ್ಳಾದರೆ ಆತನಿಗೆ ಯಾವುದೇ ಬೆಲೆ ಸಿಗುವುದಿಲ್ಲ. ಮುಖವಾಡದ ಬದುಕು ಮೂರು ದಿನವಾದರೆ, ಬಣ್ಣದ ಬದುಕು ಆರು ದಿನ ಅಷ್ಟೆ. ಆದರೆ ನಿಯತ್ತಿನ ಬದುಕಿನಿಂದ ಜೀವನದಲ್ಲಿ ಶ್ರೇಯಸ್ಸು ಪಡೆಯಲು ಸಾಧ್ಯವಾಗುತ್ತದೆ ಎಂದರು.

ಯಡಿಯೂರು ಬಾಳೆಹೊನ್ನೂರು ಖಾಸಾ ಶಾಖಾ ಮಠದ ರೇಣುಕ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಮನುಷ್ಯ ಬುದ್ಧಿವಂತನಾದಂತೆ ಧರ್ಮ, ಸಂಸ್ಕೃತಿ, ಆದರ್ಶಗಳನ್ನು ಮರೆಯುತ್ತಿದ್ದಾನೆ. ಜನ್ಮ ಕೊಟ್ಟ ತಾಯಿ, ಜೀವನ ಪಾಠ ಕಲಿಸಿದ ತಂದೆ, ಅನ್ನ ನೀಡುವ ರೈತ, ದೇಶ ಕಾಯುವ ಯೋಧ ಮತ್ತು ಅರಿವು ನೀಡುವ ಗುರುವನ್ನು ಎಂದಿಗೂ ಮರೆಯಬಾರದೆಂದರು. ಹೊನ್ನವಳ್ಳಿ ಶ್ರೀ ರಂಭಾಪುರಿ ಶಾಖಾ ಮಠದ ಶಿವಪ್ರಕಾಶ ಶಿವಾಚಾರ್ಯರು ನಾಂದಿ ನುಡಿ ಸೇವೆ ಸಲ್ಲಿಸಿದರು.

ಷಡಕ್ಷರಿ ಮಠದ ರುದ್ರಮುನಿ ಸ್ವಾಮಿಗಳು, ಅಂಬಲದೇವರಹಳ್ಳಿ ಉಜನೀಶ್ವರ ಶಿವಾಚಾರ್ಯರು ಮತ್ತು ನೊಣವಿನಕೆರೆ ಅಭಿನವ ಕಾಡಸಿದ್ಧೇಶ್ವರ ಸ್ವಾಮಿಗಳು ಉಪಸ್ಥಿತರಿದ್ದರು. ಕಾಂಗ್ರೆಸ್ ಧುರೀಣ ಟಿ ಎಸ್ ಲೋಕೇಶ್ವರ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳ ಆಶೀರ್ವಾದ ಪಡೆದರು. ಶಿವಶಂಕರ್, ರುದ್ರಮುನಿಸ್ವಾಮಿ, ನ್ಯಾಯವಾದಿ ಜಿ ನಂದಕುಮಾರ್, ಹೆಚ್ ಎನ್ ಗಂಗಾಧರ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸೇವೆ ಸಲ್ಲಿಸಿದ ದಾನಿಗಳಿಗೆ ಮತ್ತು ಅನೇಕ ಗಣ್ಯರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು.

ಟಿ ಎಸ್ ಶಿವಪ್ರಸಾದ ಸ್ವಾಗತಿಸಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ, ಗಂಗಾಧರಸ್ವಾಮಿ ಇವರಿಂದ ಭಕ್ತಿಗೀತೆ ಜರುಗಿತು. ನ್ಯಾಯವಾದಿ ಶೋಭಾ ಜಯದೇವ ನಿರೂಪಿಸಿದರು.

> ಸಂಪತ್ತು ಉಳ್ಳಾತ ಶ್ರೀಮಂತನಲ್ಲ. ಸಂತಸ ಉಳ್ಳಾತನೇ ನಿಜವಾದ ಶ್ರೀಮಂತ ಎಂಬುದನ್ನು ನೆನಪಿಡಬೇಕಾಗುತ್ತದೆ. ಸತ್ಯದ ದಾರಿಯಲ್ಲಿ ನಡೆಯುವ ಜನರಿಗೆ ಅಡ್ಡಿ-ಆತಂಕಗಳು ಎದುರಾಗುತ್ತವೆ. ಅವುಗಳಿಗೆ ಅಂಜದೇ ಅಳುಕದೇ ಧೈರ್ಯದಿಂದ ಮುನ್ನಡೆದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಮನುಷ್ಯ ಎಷ್ಟೇ ಸಿರಿವಂತನಾದರೂ ಗುಣಕ್ಕೆ ಬೆಲೆ ಜಾಸ್ತಿ. ವೀರಶೈವ ಧರ್ಮದಲ್ಲಿ ಸಂಸ್ಕಾರ ಮತ್ತು ಸದ್ಗುಣಗಳ ಪರಿಪಾಲನೆಯಿಂದ ಜೀವನದಲ್ಲಿ ಉತ್ಕರ್ಷತೆ ಕಾಣಲು ಸಾಧ್ಯವಾಗುವುದೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ.
>
> **– ಪೂಜ್ಯ ಡಾ.ವೀರಸೋಮೇಶ್ವರ ಜಗದ್ಗುರುಗಳು.**
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

## ನೀವೂ ನಮ್ಮ ಜೊತೆ ಕೈಜೋಡಿಸಿ

**'ವಿಜಯಸಾಕ್ಷಿ'**

**ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.**
**ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..**
**ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.**
**E-mail: vijayasakshidaily@gmail.com**
**ಮೊ : 9019256545**

# ಹಸಿವುಮುಕ್ತ ಕರ್ನಾಟಕದತ್ತ ಹೆಜ್ಜೆ

▶▶ಮೊದಲನೇ ಪುಟದಿಂದ

ಅನ್ನಭಾಗ್ಯ ಯೋಜನೆಯ ನೇರ ನಗದು ವರ್ಗಾವಣೆ (ಡಿಬಿಟಿ)ಗೆ ಚಾಲನಾ ಸಮಾರಂಭವು ಜುಲೈ 16ರಂದು ಮುಂಜಾನೆ 11 ಗಂಟೆಗೆ ಗದಗ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಜರುಗಲಿದೆ. ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್ ಕೆ ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಆಹಾರ ಇಲಾಖೆಯ ಸಚಿವರಾದ ಕೆ ಎಚ್ ಮುನಿಯಪ್ಪ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು.

ಇದು ಸಹಕಾರಿಯಾಗಿದೆ. ಹತ್ತು ಕೆಜಿ ಅಕ್ಕಿ ಉಳ್ಳವರ ಪಾಲಿಗೆ ತೀರಾ ಸಣ್ಣದಾಗಿ ಕಾಣಿಸಬಹುದು. ಆದರೆ, ಅದಕ್ಕೆ ಲಕ್ಷಾಂತರ ಕುಟುಂಬಗಳ ಕಣ್ಣೀರು ಒರೆಸುವ ತಾಕತ್ತಿದೆ.

ನಾವು ಯೋಜನೆಗಾಗಿ ಎಷ್ಟು ಅನುದಾನವನ್ನು ಖರ್ಚು ಮಾಡುತ್ತೇವೆ ಎನ್ನುವುದಕ್ಕಿಂತ, ಯಾರಿಗಾಗಿ ಆ ಹಣವನ್ನು ವಿನಿಯೋಗ ಮಾಡುತ್ತಿದ್ದೇವೆ ಎಂಬುದು ಮುಖ್ಯ. ಈ ಹೊತ್ತಿನಲ್ಲಿ ನೂರು ಟೀಕೆಗಳು ಎದುರಾದರೂ, ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ಗುರಿ ಸಾದನೆಯೆಡೆಗೆ ದೃಢ ಹೆಜ್ಜೆ ಹಾಕುತ್ತಿರುವದು ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಸರ್ಕಾರ.

'ಹಸಿವು ಮುಕ್ತ ಕರ್ನಾಟಕ' ಪರಿಕಲ್ಪನೆಯಡಿ ಅನುಷ್ಠಾನಕ್ಕೆ ಬಂದಿರುವ ಅನ್ನಭಾಗ್ಯ ಯೋಜನೆಯಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಅಕ್ಕಿ ಬದಲು ನೇರ ನಗದು ವರ್ಗಾವಣೆ ವ್ಯವಸ್ಥೆಗೆ ಜುಲೈ 14ರಂದು ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಚಾಲನೆ ನೀಡಿದ್ದಾರೆ.

ಅಕ್ಕಿ ಸಿಗುವ ತನಕ ಕಾರ್ಡ್‌ದಾರರಿಗೆ ಹಣ ನೀಡಲಾಗುವುದು. ಸರ್ಕಾರ ನೀಡುವ ಹಣವನ್ನು ಫಲಾನುಭವಿಗಳು ದುರ್ಬಳಕೆ ಮಾಡಿಕೊಳ್ಳದೇ ಅಕ್ಕಿಯನ್ನು ಖರೀದಿಸಬೇಕು.

ಅನ್ನಭಾಗ್ಯ ಯೋಜನೆ ಬಗ್ಗೆ ಬೇರೆಯವರು ನಾನಾ ವ್ಯಾಖ್ಯಾನ ಮಾಡಿದರೂ, ಜನರು ಖುಷಿಯಾಗಿದ್ದಾರೆ. ಕೊಟ್ಟ ಮಾತಿನಂತೆ ಸರ್ಕಾರ ನಡೆದುಕೊಳ್ಳುವ ರೀತಿ ಜನಸಾಮಾನ್ಯರಲ್ಲಿ ಹೊಸ ಹುರುಪು ತಂದಿದೆ. ಅನ್ನಭಾಗ್ಯ ಯೋಜನೆಗೆ ವಾರ್ಷಿಕ 10 ಸಾವಿರ ಕೋಟಿ ರೂ.ವೆಚ್ಚವಾಗಲಿದೆ. ಐದು ಗ್ಯಾರಂಟಿಗಳಿಗೆ 57 ಸಾವಿರ ಕೋಟಿ ರೂ. ಬೇಕಾಗುತ್ತದೆ. ಇದಕ್ಕೆ ಬಜೆಟ್‌ನಲ್ಲಿ ಭದ್ರ ಅಡಿಪಾಯ ಹಾಕಲಾಗಿದೆ. ಅನ್ನಭಾಗ್ಯದಿಂದ 1.28 ಕೋಟಿ ಬಿಪಿಎಲ್, 45 ಲಕ್ಷ ಅಂತ್ಯೋದಯ ಕುಟುಂಬಗಳು ಸೇರಿ 4.42 ಕೋಟಿ ಫಲಾನುಭವಿಗಳಿಗೆ ಲಾಭವಾಗಲಿದೆ.

**– ವಸಂತ ಬಿ ಮಡ್ಲೂರ.**
ವಾರ್ತಾಧಿಕಾರಿ, ಗದಗ.

## ದಲಿತ ಬಹುಜನ ಚಳುವಳಿ ಕರ್ನಾಟಕ ಸಂಘಟನೆಯಿಂದ ಜಿಲ್ಲಾಧಿಕಾರಿಗಳಿಗೆ ಒತ್ತಾಯ

# ಫಲಾನುಭವಿಗಳಿಗೆ ನಿವೇಶನ ಗುರುತಿಸಿಕೊಡಿ



ಲಕ್ಕುಂಡಿ ಗ್ರಾಮಕ್ಕೆ ಮಂಜೂರಾಗಿದ್ದ ಪ್ರಧಾನ ಮಂತ್ರಿ ಆವಾಸ್ ಯೋಜನೆಯ 37 ವಸತಿ ರಹಿತ ಕುಟಂಬಗಳಿಗೆ ಸಹಾಯಧನ ವಾಪಸಾಗಗಲು ಕಾರಣರಾದ ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ ಸಂಘಟನೆ, ಕಳೆದ 4 ತಿಂಗಳ ಹಿಂದೆಯೇ ರಾಜೀವಗಾಂಧಿ ವಸತಿ ನಿಗಮದಿಂದ 37 ವಸತಿ ರಹಿತರಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ನಿವೇಶನ ಇರುವ ಕುಟುಂಬಗಳಿಗೆ ಮನೆ ನಿರ್ಮಿಸಲು ಅನುದಾನ ಒದಗಿಸಲು ಗ್ರಾಮಸಭೆ ಮುಖಾಂತರ ಪಲಾನುಭವಿಗಳನ್ನು ಆಯ್ಕೆ ಮಾಡಬೇಕಾಗಿತ್ತು.

ಇದಕ್ಕೆ ನಿಗಮವು ಜೂನ್ 30, 2023ರವರೆಗೂ ಸಮಯವನ್ನು ನೀಡಿತ್ತು. ಆದರೆ ಪಿಡಿಓ ಮತ್ತು ಆಡಳಿತ ಮಂಡಳಿಯ ಗುದ್ದಾಟದಿಂದ ಗ್ರಾಮ ಸಭೆ ಕರೆಯದೇ ಇರವುದರಿಂದ ಜೂನ್ 30ರಂದು 37 ಮನೆಗಳ ಅನುದಾನವು ರದ್ದಾಗಿದೆ. ಇದರಲ್ಲಿ 7 ಎಸ್‌ಸಿ, 5 ಅಲ್ಪ ಸಂಖ್ಯಾತರು ಹಾಗೂ 25 ಸಾಮಾನ್ಯ ಕುಟುಂಬಗಳು ಅನುದಾನದಿಂದ ವಂಚಿತರಾಗಿದ್ದಾರೆ. ಸರಕಾರದ ಜನಪ್ರಿಯ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರದೇ ಬಡ ಕುಟುಂಬಗಳು ಸೂರು ನಿರ್ಮಿಸಿಕೊಳ್ಳಲು ಅನ್ಯಾಯ ಮಾಡಿದ ಪಿಡಿಓ ಹಾಗೂ ಆಡಳಿತ ಮಂಡಳಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಬಡವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು.

■ **ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಕಳೆದ ಮಾರ್ಚ್ 23ರಂದು ನಿವೇಶನರಹಿತ ಫಲಾನುಭವಿಗಳಿಗೆ ನೀಡಿದ ಹಕ್ಕುಪತ್ರದ ಚಕ್‌ಬಂದಿ ಪ್ರಕಾರ ನಿವೇಶನವನ್ನು ಗುರುತಿಸಿಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ದಲಿತ ಬಹುಜನ ಚಳುವಳಿ ಕರ್ನಾಟಕ ಸಂಘಟನೆಯು ಒತ್ತಾಯಿಸಿದೆ.

ಈ ಬಗ್ಗೆ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದ ಸಂಘಟನೆಯ ಅಧ್ಯಕ್ಷೆ ನಾಗಮ್ಮ ಹಾಲಿನವರ, ತಹಸೀಲ್ದಾರರ ಹೆಸರಿನಲ್ಲಿದ್ದ 7 ಎಕರೆ ಜಮೀನಿನಲ್ಲಿಯ ನಿವೇಶನದಲ್ಲಿ, ಗ್ರಾಮ ಸಭೆಯಲ್ಲಿ ಆಯ್ಕೆಯಾದ 164 ಪಲಾನುಭವಿಗಳಲ್ಲಿ 93 ಫಲಾನುಭವಿಗಳಿಗೆ ಮಾರ್ಚ್ 23ರಂದು ಹಕ್ಕುಪತ್ರವನ್ನು ನೀಡಲಾಗಿದೆ. ನಿವೇಶನ ನೀಡುವ ನಕ್ಷೆಯ ಅನುಮೋದನೆ ಪಡೆದು, ಹಕ್ಕುಪತ್ರ ಒದಗಿಸಲಾಗಿದೆ. ಆದರೆ, ಹಕ್ಕುಪತ್ರ ಪಡೆದವರಿಗೆ ನಕ್ಷೆಯ ಸಂಖ್ಯೆಗನುಗುಣವಾಗಿ ನಿವೇಶನವನ್ನು ಗುರುತಿಸಿಕೊಡಲು ಪಂಚಾಯತಿ ಅಧಿಕಾರಿಗಳು ವ್ಯವಸ್ಥೆ ಮಾಡಿಲ್ಲ. ಈ ಕುರಿತು ಪಿಡಿಓ ಅವರನ್ನು ಕೇಳಿದರೆ ಪಂಚಾಯತಿ ಸದಸ್ಯರು ಬಂದಿಲ್ಲ, ಕಳೆದ ಮೂರು ತಿಂಗಳಿಂದ ಸಭೆ ಕರೆದರೂ ಸಭೆಗೆ ಗೈರು ಹಾಜರಾಗುತ್ತಿದ್ದಾರೆ, ಅನುದಾನದ ಕೊರತೆಯಿದೆ ಇತ್ಯಾದಿ ಕಾರಣ ಹೇಳುತ್ತಿದ್ದಾರೆ.

ಬಡ ಕುಟುಂಬಗಳ ಫಲಾನುಭವಿಗಳು ಬಾಡಿಗೆ ಮನೆಯಲ್ಲಿ ಹತ್ತಾರು ವರ್ಷದಿಂದ ವಾಸವಾಗಿದ್ದಾರೆ. ಶೀಘ್ರವಾಗಿ ನಿವೇಶನ ಸಂಖ್ಯೆಯನ್ನು ಗುರುತಿಸಿ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಚಳುವಳಿಯ ಅಧ್ಯಕ್ಷ ಎಂ ವೆಂಕಟೇಶ, ಸಂಘಟನೆಯ ಯುವ ಮುಖಂಡ ರಮೇಶ ಕೊಳೂರು, ಮೆಹಬೂಬಿ ನದಾಫ, ಕಾಳವ್ವ ಸತ್ಯಣ್ಣವರ, ಮಲ್ಲಮ್ಮ ನಾಗಗೊಂಡನಹಳ್ಳಿ ರೇಣುಕಾ ಭಜಂತ್ರಿ ಇದ್ದರು.

# ನಾಳೆಯಿಂದ ಆಗಸ್ಟ್ 2 ರವರೆಗೆ ಆಂದೋಲನ

▶▶ಮೊದಲನೇ ಪುಟದಿಂದ

ಬಂದಾಗ ಮತ್ತು ಬೇರೆ ಬೇರೆ ಸಂದರ್ಭದಲ್ಲಿ ಕ್ಷಯರೋಗಿಗಳು ಪತ್ತೆ ಆಗುತ್ತಿರುತ್ತಾರೆ. ಜಿಲ್ಲೆಯಲ್ಲಿ ಪ್ರಸ್ತುತ 647 ಕ್ಕೂ ಹೆಚ್ಚು ಕ್ಷಯರೋಗಿಗಳಿದ್ದು ಎಲ್ಲರೂ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆಂದೋಲನ ಸಮಯದಲ್ಲಿ ಹೊಸ ರೋಗಿಗಳ ಪತ್ತೆಗಾಗಿ ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಹಾಗೂ ಆಶಾ ಕಾರ್ಯಕರ್ತೆಯರು ಮನೆ ಬಾಗಿಲಿಗೆ ಬಂದಾಗ ಸಾರ್ವಜನಿಕರು ಸಹಕಾರವೂ ಅಗತ್ಯವಾಗಿದೆ ಎಂದು ಸಭೆಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಕ್ಷಯ ರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನದ ಕುರಿತು ಬಿತ್ತಿಪತ್ರವನ್ನು ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಜಗದೀಶ್ ನುಚ್ಚಿನ, ಜಿ.ಪಂ. ಮುಖ್ಯ ಲೆಕ್ಕಾಧಿಕಾರಿ ಪ್ರಶಾಂತ್, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ತಾಲೂಕಾ ಆರೋಗ್ಯಾಧಿಕಾರಿಗಳು, ಹಾಗೂ ಸಂಯೋಜಕರು ಹಾಜರಿದ್ದರು.

# ಮಹಿಳೆಯ ಸ್ವಾವಲಂಬಿ ಬದುಕಿಗೆ ನರೇಗಾ ಆಸರೆ

▶▶ಮೊದಲನೇ ಪುಟದಿಂದ

ಹೆಚ್ಚು ಮಾಡಲು ಸೂಚಿಸಿದರು.

ನರೇಗಾ ಯೋಜನೆಯ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಜಾರಿಗೆ ತರಲಾಗಿದೆ, ಇದರ ಲಾಭ ಪಡೆದುಕೊಳ್ಳುವುದು ಪ್ರತಿಯೊಬ್ಬರ ಹಕ್ಕಾಗಿದೆ. ಮಹಿಳಾ ಕಾರ್ಮಿಕರ ಸಂಖ್ಯೆಯನ್ನು ವೃದ್ಧಿಸಿ, ಅವರಲ್ಲಿ ಸ್ವಾವಲಂಬಿ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ನರೇಗಾ ತಂಡದ ವತಿಯಿಂದ ವಿಶೇಷ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ. ಮಹಿಳೆಯರು ಖಾಸಗಿ ಕಾಮಗಾರಿ ಸೇರಿದಂತೆ ಇತರೆಡೆ ಮಹಿಳೆಯರು ದುಡಿದರೆ ನೀಡುವ ವೇತನದಲ್ಲಿ ತಾರತಮ್ಯವಿದೆ. ಪುರುಷರಿಗೆ ಕೊಡುವಷ್ಟು ಕೂಲಿ ಹಣವನ್ನು ಮಹಿಳಾ ಕಾರ್ಮಿಕರಿಗೆ ನೀಡುವುದಿಲ್ಲಾ. ಆದರೆ, ನರೇಗಾದಡಿ ಸಮಾನ ಕೂಲಿ ನಿಯಮವಿದೆ. ಹೀಗಿದ್ದರೂ ನರೇಗಾ ಯೋಜನೆಯ ಕಾಮಗಾರಿಗಳಲ್ಲಿ ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆ ಕಡಿಮೆ. ಇದನ್ನು ಮನಗಂಡ ಜಿಲ್ಲಾ, ತಾಲೂಕು ಪಂಚಾಯತಿ ವತಿಯಿಂದ ಮುಂಬರುವ ಎಲ್ಲ ಕಾಮಗಾರಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುವಂತೆ ಜಾಗೃತಿ ಮೂಡಿಸುವುದು ಹಾಗೂ ಕಡ್ಡಾಯವಾಗಿ ಮಹಿಳೆಯರ ಹೆಸರಿನಲ್ಲಿ ಎನ್‌ಎಂಆರ್ ಸೃಜಿಸುವಂತೆ ಮಾನ್ಯ ಸಿಇಓ ಅವರು ಸೂಚಿಸಿದ್ದಾರೆ. ಎನ್‌ಆರ್‌ಎಲ್‌ಎಂ, ತೋಟಗಾರಿಕೆ ಇಲಾಖೆ, ನರೇಗಾ ಯೋಜನೆ ಸಹಯೋಗದಲ್ಲಿ ಪೌಷ್ಟಿಕ ತೋಟ ಕಾಮಗಾರಿಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಶಿಲ್ಪಾ ಕವಲೂರ ಮಾತನಾಡಿ, ಮುಂದಿನ ವಾರದಲ್ಲಿ ಮಹಿಳೆಯರಿಗಾಗಿ ಸಮುದಾಯ ಕಾಮಗಾರಿ ಆರಂಭ ಮಾಡುತ್ತೇವೆ ಈ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುವ ಮೂಲಕ ನಮ್ಮ ಗ್ರಾಮ ಪಂಚಾಯತಿಯಿಂದ ಶೇ 60% ಪ್ರತಿಶತ ಮಾಡುವುದು ನಮ್ಮ ಗುರಿ, ನಮ್ಮ ಪಂಚಾಯತಿ ಅತಿ ಕಡಿಮೆ ಮಹಿಳಾ ಪಾಲ್ಗೊಳ್ಳುವಿಕೆಯಿದೆ, ಇದನ್ನು ಹೆಚ್ಚಿಸುವುದರಲ್ಲಿ ಗ್ರಾಮ ಪಂಚಾಯತಿ ಸದಸ್ಯರ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಐಇಸಿ ಮಂಜುನಾಥ್, ತಾಂತ್ರಿಕ ಸಹಾಯಕ ಅಜಯ ಅಬ್ಬಿಗೇರಿ, ಎನ್.ಆರ್. ಎಲ್.ಎಂ ತಾಲೂಕು ವ್ಯವಸ್ಥಾಪಕ ಗುರುಬಸಪ್ಪ ವೀರಾಪೂರ, ಜಿಕೆ–ಎಂ ಯಶೋಧ ಅಮರಗೋಳ ಸೇರಿದಂತೆ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಇದ್ದರು.

# ಪತ್ರಿಕಾ ದಿನಾಚರಣೆ ಇಂದು

■ **ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗದಗ ಜಿಲ್ಲಾ ಘಟಕದ ವತಿಯಿಂದ ಜು. 16 ರಂದು ರವಿವಾರ ಬೆಳಿಗ್ಗೆ 10.30ಕ್ಕೆ ಶ್ರೀನಿವಾಸ ಭವನದಲ್ಲಿ ಜಿಲ್ಲಾ ಮಟ್ಟದ ಪತ್ರಿಕಾ ದಿನಾಚರಣೆ, ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಗದಗ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಅವ್ವ ಸೇವಾ ಟ್ರಸ್ಟ್ ಸ್ಥಾಪಿಸಿದ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಪ್ರಜಾವಾಣಿ ಪತ್ರಿಕೆಯಲ್ಲಿ ಮುಖ್ಯ ಉಪ ಸಂಪಾದಕಿಯಾಗಿ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಎಸ್.ರಶ್ಮಿ ಅವರಿಗೆ ದತ್ತಿನಿಧಿಯ ಮೊದಲ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಘನ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಕಾರ್ಯಕ್ರಮ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡುವರು. ಕಾನಿಪ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಪ್ರತಿಭಾ ಪುರಸ್ಕಾರ ನೀಡುವರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗದಗ ಜಿಲ್ಲಾಧ್ಯಕ್ಷ ರಾಜು ಎಂ. ಹೆಬ್ಬಳ್ಳಿ ಅವರು ಅಧ್ಯಕ್ಷತೆವಹಿಸುವರು. ಪ್ರಶಸ್ತಿ ಪುರಸ್ಕೃತೆ ಪತ್ರಕರ್ತೆ ರಶ್ಮಿ ಎಸ್. ಸೇರಿ ಶಾಸಕರಾದ ಸಿ.ಸಿ. ಪಾಟೀಲ, ಜಿ.ಎಸ್. ಪಾಟೀಲ, ಡಾ। ಚಂದ್ರು ಲಮಾಣಿ, ಸಂಸದ ಶಿವಕುಮಾರ ಉದಾಸಿ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ, ಸಲೀಂ ಅಹ್ಮದ್, ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ ಮುಖ್ಯ ಅತಿಥಿಗಳಾಗಿ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಜಿಪಂ ಸಿಇಓ ಡಾ. ಸುಶೀಲಾ ಬಿ., ಅವ್ವ ಸೇವಾ ಟ್ರಸ್ಟ್ ಕಾರ್ಯದರ್ಶಿ ಶಶಿ ಸಾಲಿ, ಸಂಚಾಲಕ ಡಾ. ಬಸವರಾಜ ಧಾರವಾಡ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಪುಂಡಲೀಕ ಬಾಳೋಜಿ, ಪ್ರಧಾನ ಕಾರ್ಯದರ್ಶಿ ಜೆ.ಸಿ. ಲೋಕೇಶ, ಕಾರ್ಯದರ್ಶೀ ಹಾಗೂ ಸಂಘದ ಗದಗ ಜಿಲ್ಲಾ ಉಸ್ತುವಾರಿ ನಿಂಗಪ್ಪ ಚಾವಡಿ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್.ಎಂ. ಶರೀಫನವರ, ಜಿಲ್ಲಾ ವಾರ್ತಾಧಿಕಾರಿ ವಸಂತ ಮಡ್ಲೂರ, ನಗರಸಭೆ ಪೌರಾಯುಕ್ತ ರಮೇಶ ಸುಣಗಾರ, ಅಖಿಲ ಕರ್ನಾಟಕ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಂಕರ ಕುದರಿಮೋತಿ ಪಾಲ್ಗೊಳ್ಳುವರು.

ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.80ಕ್ಕೂ ಅಧಿಕ ಅಂಕ ಗಳಿಸಿದ ಪತ್ರಕರ್ತರ ಮಕ್ಕಳಾದ ಅನಘಾ ಬಿ. ಕುಲಕರ್ಣಿ, ಪ್ರಣವಸಿಂಗ್ ಜಮಾದಾರ, ಚಕ್ರವರ್ತಿ ಕಾಶೀನಾಥ ಬಿಳಿಮಗ್ಗದ, ಕೀರ್ತಿ ಸಂಗಪ್ಪ ಮೆಣಸಗಿ, ಸ್ವಾತಿ ಎಸ್. ಕುಷ್ಟಗಿ, ಆದರ್ಶ ಸಿ. ಗಣಪ್ಪನವರ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗದಗ ಜಿಲ್ಲಾಧ್ಯಕ್ಷ ರಾಜು ಎಂ. ಹೆಬ್ಬಳ್ಳಿ ತಿಳಿಸಿದ್ದಾರೆ.

# ದಿಂಗಾಲೇಶ್ವರ ಸ್ವಾಮೀಜಿಗೆ ರಕ್ಷಣೆ ನೀಡಿ: ಭಕ್ತರಿಂದ ಪೋಲೀಸರಿಗೆ ದೂರು

▶▶ಮೊದಲನೇ ಪುಟದಿಂದ

ಗೋಡೆ ಹತ್ತಿ, ಅಲ್ಲಿಂದ ಗೋಶಾಲೆಯ ಮಾರ್ಗವಾಗಿ ಮೇಲೆ ಹತ್ತುತ್ತಿರುವುದನ್ನು ನಮ್ಮ ಮಠದ ಸಿಬ್ಬಂದಿಗಳು ನೋಡಿ ಅವರನ್ನು ಹಿಡಿಯಲು ಹೋದಾಗ, ಮಠದ ಹಿಂದೆ ಕತ್ತಲು ಇರುವ ಕಾರಣ ಎಲ್ಲಿ ಹೋದರು ಎಂದು ಗುರುತಿಸಲು ಆಗಲಿಲ್ಲ. ಕಳೆದ ಒಂದು ವಾರದಿಂದ ಹಿಂದಿ ಮಾತನಾಡುವ ವ್ಯಕ್ತಿಗಳು ಮಠದ ಸುತ್ತಮುತ್ತ ತಿರುಗಾಡುತ್ತಿರುವುದು ಸಂಶಯಕ್ಕೆ ಕಾರಣವಾಗಿದೆ. ಇದರಿಂದ ಮಠದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದ್ದು, ಈ ಬಗ್ಗೆ ಶ್ರೀಗಳ ಕಾಳಜಿವಹಿಸಿ, ಸೂಕ್ತ ರಕ್ಷಣೆ ನೀಡಬೇಕೆಂದು ಶುಕ್ರವಾರ ಶಿರಹಟ್ಟಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಶಿರಹಟ್ಟಿ ಪಿಎಸ್‌ಐ ಈರಪ್ಪ ರಿತ್ತಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಸಿಪಿಐ ಮಾರ್ಗದರ್ಶನದಂತೆ ದೂರನ್ನು ಸ್ವೀಕರಿಸಿ ಮಠಕ್ಕೆ ಹಾಗೂ ಸ್ವಾಮೀಜಿಗಳ ಸುರಕ್ಷತೆಯ ದೃಷ್ಟಿಯಿಂದ 24*7 ಪೊಲೀಸ್ ಸಿಬ್ಬಂದಿ ನಿಯೋಜಿಸಿದ್ದು, ರಾತ್ರಿ ವೇಳೆ ಗಸ್ತು ಹಾಗೂ ಉಸ್ತುವಾರಿ ವಹಿಸಲಾಗುತ್ತಿದೆ. ಆಯಕಟ್ಟಿನ ಸ್ಥಳಗಳಲ್ಲಿ ಸಿಸಿ ಟಿವಿ ಅಳವಡಿಸುವಂತೆ ಸೂಚಿಸಲಾಗಿದೆ ಎಂದರು.

# ಉದ್ಯೋಗಖಾತ್ರಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಲಿ



■ **ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಮಹಾತ್ಮಾ ಗಾಂಧೀಜಿ ನರೇಗಾ ಯೋಜನೆಯಡಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಪಡೆದು ಆರ್ಥಿಕವಾಗಿ ಸಬಲರಾಗಬೇಕೆಂದು ಡಿಐಇಸಿ ವೀರಭದ್ರಪ್ಪ ಸಜ್ಜನ ಹೇಳಿದರು.

ಅವರು ಶನಿವಾರ ಶಿರಹಟ್ಟಿ ತಾಲೂಕಿನ ಮಜ್ಜೂರ ಗ್ರಾಮ ಪಂಚಾಯತನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಜಿ ಪಂ ಗದಗ, ತಾ ಪಂ ಶಿರಹಟ್ಟಿ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ ಮಹಿಳಾ ಕಾಯಕೋತ್ಸವ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ನರೇಗಾ ಯೋಜನೆಯಡಿ ಮಹಿಳೆಯರ ಭಾಗವಹಿ ಸುವಿಕೆಯನ್ನು ಶೇ.60ರಷ್ಟು ಹೆಚ್ಚಿಸುವ ಸಲುವಾಗಿ ಈ ಅಭಿಯಾನವನ್ನು ನಡೆಸಲಾಗುತ್ತಿದೆ. ನರೇಗಾ ಯೋಜನೆಯ ವೈಯಕ್ತಿಕ ಸೌಲಭ್ಯಗಳನ್ನು ದೊರಕಿಸಿಕೊಡಲಾಗುವುದು. ಇವರೆಲ್ಲರಿಗೂ ಗ್ರಾ ಪಂ ವತಿಯಿಂದ ನಿರಂತರವಾಗಿ ಕೆಲಸ ಕೊಡಲಾಗುತ್ತದೆ. ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾಗಬೇಕೆಂದು ಹೇಳಿದರು.

ತಾಲೂಕು ಐಇಸಿ ಸಂಯೋಜಕ ಮಂಜುನಾಥ ಸ್ವಾಮಿ, ಪಿಡಿಓ ವೀರಣ್ಣ ವಡ್ಡರ, ಗ್ರಾ ಪಂ ಅಧ್ಯಕ್ಷ ಪ್ರಭು ಲಮಾಣಿ, ಮಾರುತಿ ಕೊಡ್ಲಿ, ಅರುಣಕುಮಾರ, ಲಕ್ಷ್ಮೀ ಭಂಡಾರಿ ಹಾಗೂ ಗ್ರಾ ಪಂ ಸದಸ್ಯರು ಉಪಸ್ಥಿತರಿದ್ದರು.

# ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಿ

■ **ವಿಜಯಸಾಕ್ಷಿ ಸುದ್ದಿ, ಗದಗ**



ಜೀವನದ ದಿನಮಾನಗಳನ್ನು ಮಾನವೀಯ ಮೌಲ್ಯಗಳೊಂದಿಗೆ ಮಧುರ ಕ್ಷಣಗಳಾಗಿ ಕಳೆದು, ಬದುಕಿನ ಪ್ರತೀ ದಿನವನ್ನು ಸಾರ್ಥಕವಾಗಿ ಕಳೆಯಬೇಕು. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿ ಜೀವನವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಪೂಜ್ಯ ಸದಾಶಿವಾನಂದ ಮಹಾಸ್ವಾಮಿಗಳವರು ಆಶೀರ್ವಚನ ನೀಡಿದರು.

ಅವರು ಶ್ರೀ.ಜ.ಶಿವಾನಂದ ಪದವಿಪೂರ್ವ ಕಾಲೇಜಿನ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರೊ. ಅನ್ನದಾನಿ ಹಿರೇಮಠ ಆದರ್ಶ ವಿದ್ಯಾರ್ಥಿಯ ಬದುಕಿನ ಆಗುಹೋಗುಗಳನ್ನು ಉದಾಹರಣೆಯ ಮೂಲಕ ವಿವರಿಸಿದರು. ಪ್ರಾಚಾರ್ಯ ಎಸ್ ವ್ಹಿ ವೆರ್ಣೇಕರ ಅವರು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಯಲ್ಲಿ ಸಕ್ರಿಯವಾಗಿ ತೊಡಗುವಂತೆ ಕಿವಿಮಾತು ಹೇಳಿದರು.

ಗೌರಿ ಹಿರೇಮಠ ಪ್ರಾರ್ಥಿಸಿದರು. ಪ್ರಿಯಾಂಕಾ ಪಾಟೀಲ ಸ್ವಾಗತಿಸಿದರು. ಎಸ್ ಬಿ ಹಿರೇಮಠ ಅತಿಥಿಗಳ ಪರಿಚಯ ಮಾಡಿದರು. ಶ್ರೀದೇವಿ ಜಂಗಮನಿ ಕಾರ್ಯಕ್ರಮ ನಿರೂಪಿಸಿದರು. ಸುಪ್ರಿಯಾ ಹಂದ್ರಾಳ ವಂದಿಸಿದರು. ಸಮಾರಂಭದಲ್ಲಿ ಡಾ. ಜಿ ಬಿ ಪಾಟೀಲ, ಸಂಸ್ಥೆಯ ಆಡಳಿತಾಧಿಕಾರಿಗಳು, ಕಾಲೇಜಿನ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ವಿಶ್ವ ಯುವ ಕೌಶಲ್ಯ ದಿನಾಚರಣೆಯಲ್ಲಿ ಡಾ. ಬಸವರಾಜ್ ಮಲ್ಲೂರು ಅಭಿಪ್ರಾಯ

# ಕೌಶಲ್ಯ ಬಳಸಿ ಜೀವನೋಪಾಯ ಕಂಡುಕೊಳ್ಳಿ

■ **ವಿಜಯಸಾಕ್ಷಿ ಸುದ್ದಿ, ಗದಗ**



ಇಂದಿನ ಯುವ ಪೀಳಿಗೆಯವರಲ್ಲಿ ಒಂದೊಂದು ಕೌಶಲ್ಯವಿದ್ದು ಆ ಕೌಶಲ್ಯವನ್ನು ಬೆಳಕಿಗೆ ತಂದು ತಮ್ಮ ಜೀವನೋಪಾಯಕ್ಕೆ ದಾರಿ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಡಾ. ಬಸವರಾಜ್ ಮಲ್ಲೂರು ತಿಳಿಸಿದರು.

ಗದಗ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಶನಿವಾರದಂದು ವಿಶ್ವ ಯುವ ಕೌಶಲ್ಯ ದಿನಾಚರಣೆಯ ನಿಮಿತ್ತ ಸಸಿಗೆ ನೀರು ಹಾಕುವುದರೊಂದಿಗೆ ಉದ್ಘಾಟಿಸಿ ಅವರು ಮಾತನಾಡಿದರು.

ಇಲಾಖೆಯಿಂದ ವಿವಿಧ ತರಬೇತಿಗಳನ್ನು ನೀಡುತ್ತಿದ್ದು, ಕಂಪ್ಯೂಟರ ತರಬೇತಿ, ಬ್ಯೂಟಿಶಿಯನ್, ಟೇಲರಿಂಗ, ಟ್ಯಾಲಿ, ಇನ್ನು ಹಲವಾರು ತರಬೇತಿಗಳನ್ನು ನೀಡುತ್ತಿದ್ದು, ಅವುಗಳ ಉಪಯೋಗದಿಂದ ಕೌಶಲ್ಯವನ್ನು ಪಡೆದು ಸೆಲ್ಫ್ ಎಂಪ್ಲಾಯಮೆಂಟನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಅನನ್ಯ ತರಬೇತಿ ಸಂಸ್ಥೆಯ ಮುಖ್ಯಸ್ಥರಾದ ರಂಜಿತಾ ವ್ಹಿ. ಕುಲಕರ್ಣಿ ಮಾತನಾಡುತ್ತಾ, ಕೌಶಲ್ಯವು ಪ್ರತಿಯೊಬ್ಬರಲ್ಲಿಯೂ ಇದ್ದು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕೇವಲ ಡಿಗ್ರಿ ಪಡೆದರೆ ಸಾಲದು, ಕೌಶಲ್ಯವಿದ್ದರೆ ಮಾತ್ರ ನಿಮ್ಮ ಜೀವನದಲ್ಲಿ ಉದ್ಯೋಗವನ್ನು ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ. ತಮ್ಮ ತಮ್ಮ ಕೌಶಲ್ಯವನ್ನು ಬೆಳಕಿಗೆ ತಂದು ಉತ್ತಮ ಉದ್ಯೋಗವನ್ನು ಕಂಡುಕೊಳ್ಳಬಹುದು ಎಂದು ತಿಳಿಸಿದರು. ಇದಲ್ಲದೇ, "ಸ್ಕಿಲ್ ಇಂಡಿಯಾ" ವೆಬ್ ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದರಿಂದ, ನಿಮ್ಮ ವಿದ್ಯಾರ್ಹತೆಗೆ ತಕ್ಕಂತೆ, ವಿವಿಧ ಕಂಪನಿಗಳನ್ನು ನೀವು ವೆಬ್ ಸೈಟ್‌ನಲ್ಲಿ ನೋಡಿಕೊಳ್ಳಬಹುದು. ಅದರಂತೆ ವಿವಿಧ ಕಂಪನಿಯವರಿಗೆ ಬೇಕಾದಂತಹ ಉದ್ಯೋಗದಾತರನ್ನೂ ಕೂಡ "ಸ್ಕಿಲ್ ಇಂಡಿಯಾ" ವೆಬ್ ನಿಂದ ಪಡೆಯುವಂತೆ ಸಹಾಯಕವಾಗಿರುತ್ತದೆ. ಪ್ರತಿಯೊಬ್ಬರೂ ಕೌಶಲ್ಯವನ್ನು ಬೆಳಕಿಗೆ ತಂದು ಇತರರಿಗೂ ಕೂಡಾ ಉದ್ಯೋಗವನ್ನು ನೀಡುವಷ್ಟರ ಮಟ್ಟಿಗೆ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಮಹಾವಿದ್ಯಾಲಯದ ಕನ್ನಡ ಉಪನ್ಯಾಸಕರಾದ ಡಾ.ಬಿ.ಹೆಚ್.ಬುಳ್ಳನ್ನವರ ಮಾತನಾಡಿ, ಸರ್ಕಾರದಿಂದ ವಿವಿಧ ತರಬೇತಿಗಳನ್ನು ನೀಡಲಾಗುತ್ತಿದ್ದು ಅದರ ಸದುಪಯೊಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಇಂಗ್ಲೀಷ ಉಪನ್ಯಾಸಕರಾದ ಡಾ ಕೇಶವ ಪ್ರಲ್ಹಾದಾಚಾರ್ಯ, ವಿಶ್ವ ಯುವ ಕೌಶಲ್ಯ ದಿನಾಚರಣೆಯ ಬಗ್ಗೆ ಹಾಗೂ ಕೌಶಲ್ಯ ಬಗ್ಗೆ ವಿವರವಾದ ಮಾಹಿತಿ ನೀಡಿದ್ದು ಪ್ರತಿಯೊಬ್ಬರೂ ತಮ್ಮ ಕೌಶಲ್ಯವನ್ನು ಕಂಡುಕೊಂಡು ಜೀವನೋಪಾಯ ರೂಡಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕರಾದ ಉಮಾ ಪಾಳೇಗಾರ, ಸಹಾಯಕ ಸಾಂಖ್ಯಿಕ ಅಧಿಕಾರಿ ಪ್ರಕಾಶ ಕೋಳಿವಾಡ, ಕಾರ್ತಿಕ ಉಪಸ್ಥಿತರಿದ್ದರು. ಶೇಕರಡ್ಡಿ, ಹೆಚ್.ಹೆಚ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಯೋಗಾಭ್ಯಾಸ ಮಾಡಿ, ನಿರೋಗಿಗಳಾಗಿ

■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**



ನಿತ್ಯ ಜೀವನದಲ್ಲಿ ಯೋಗವನ್ನು ರೂಢಿಸಿಕೊಳ್ಳಲು ಯಾವುದೇ ವಯಸ್ಸಿನ ಮಿತಿಯಿಲ್ಲ. ಯೋಗದಿಂದ ಆರೋಗ್ಯ ಸುಧಾರಣೆಗೆ ಸಹಕಾರಿಯಾಗುತ್ತದೆ. ಮುಖ್ಯವಾಗಿ, ಇಳಿವಯಸ್ಸಿನಲ್ಲಿರುವವರು ಸೂಕ್ಷ್ಮ ಯೋಗ ವ್ಯಾಯಾಮಗಳನ್ನು ಮಾಡಿದರೆ ಆರೋಗ್ಯದಿಂದಿರಲು ಸಾಧ್ಯವಾಗುತ್ತದೆ ಎಂದು ಯೋಗಸಾಧಕಿ ವೀಣಾ ಹತ್ತಿಕಾಳ ಹೇಳಿದರು.

ಅವರು ಪಟ್ಟಣದ ಜಿ ಎಫ್ ಉಪನಾಳ ಪ್ರತಿಷ್ಠಾನದ ಶಾಂತಿಧಾಮ ವೃದ್ಧಾಶ್ರಮದಲ್ಲಿ 10 ದಿನಗಳ ಕಾಲ ಉಚಿತವಾಗಿ ಹಮ್ಮಿಕೊಂಡಿದ್ದ ಯೋಗ ತರಬೇತಿ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದರು.

ಎಲ್ಲರೂ ಸರಳವಾದ ನಿತ್ಯ ಯೋಗವನ್ನು ಮಾಡುತ್ತಾ ಹೋದಲ್ಲಿ, ಎಲ್ಲರಂತೆ ಯೋಗಾಸನಗಳನ್ನು ಮಾಡಬಹುದಾಗಿದೆ. ಯೋಗದಿಂದ ಅನೇಕ ರೋಗಗಳು ಕಡಿಮೆಯಾಗುವ ಬಗ್ಗೆ ಸಂಶೋಧನೆಯಿಂದ ದೃಢಪಟ್ಟಿದೆ. ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ನಿರೋಗಿಗಳಾಗಿ ಬದುಕಿ ಎಂದು ಹೇಳಿದ ಅವರು, ಶಾಂತಿಧಾಮ ವೃದ್ಧಾಶ್ರಮದಲ್ಲಿನ ಎಲ್ಲ ವೃದ್ಧರೂ 10 ದಿನಗಳ ಕಾಲ ಯೋಗ ಶಿಬಿರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ನಿತ್ಯವೂ ಅವುಗಳನ್ನು ಮಾಡುತ್ತಾ ಹೋಗುವಂತೆ ಹಿರಿಯರಿಗೆ ಸಲಹೆ ನೀಡಿದರು.

ಯೋಗ ಸಾಧಕಿ ಶಿವಲೀಲಾ ಚೆಕ್ಕಿ ಮಾತನಾಡಿ, ವೃದ್ಧಾಶ್ರಮದಲ್ಲಿರುವ ಎಲ್ಲ ಹಿರಿಯರು ಇದೀಗ ಮಕ್ಕಳಂತೆ. ಅವರನ್ನು ಕಾಳಜಿಯಿಂದ ನೋಡುವುದು ಅವಶ್ಯವಾಗಿದೆ. ಇವರಲ್ಲಿ ಎಲ್ಲರೂ ಬಹು ಉತ್ಸಾಹದಿಂದ ಯೋಗ ಶಿಬಿರದಲ್ಲಿ ನಿತ್ಯ ಪಾಲ್ಗೊಂಡು ಭಜನೆ, ಪ್ರಾಣಾಯಾಮಗಳನ್ನು ಸರಿಯಾಗಿ ಮಾಡುತ್ತಿರುವದರಿಂದ ಅನೇಕರಿಗೆ ಹಲವಾರು ಪ್ರಯೋಜನಗಳಾಗಿವೆ. ವೃದ್ಧರನ್ನು ಕಡೆಗಣಿಸದೆ ಗೌರವದಿಂದ ಕಾಣುವ ಮೂಲಕ ಅವರು ಆರೋಗ್ಯ ಮತ್ತು ನೆಮ್ಮದಿಯಿಂದ ಇರುವಂತೆ ಇಲ್ಲಿ ನೋಡಿಕೊಳ್ಳುತ್ತಿರುವದು ಮೆಚ್ಚುಗೆಯ ಸಂಗತಿಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಉಪಾಧ್ಯಕ್ಷ ಡಿ ಎಂ ಪೂಜಾರ ವಹಿಸಿದ್ದರು. ಯೋಗ ಸಾಧಕರಾದ ಪ್ರಕಾಶ ಹುಲಬಜಾರ, ಪುಷ್ಪಾ ಪೆರಡೂರ, ನಂದಾ ಮಾಳವಾಡ, ರೂಪಾ ಸಂತಿ, ಗೀತಾ ಹುಲಬಜಾರ, ನಂದಾ ಧರ್ಮಾಯತ, ವೃದ್ಧಾಶ್ರಮದ ಹಿರಿಯರು ಪಾಲ್ಗೊಂಡಿದ್ದರು. ವಸತಿ ನಿಲಯಪಾಲಕಿ ಸುನೀತಾ ಜಿ ಕಾರ್ಯಕ್ರಮ ನಿರೂಪಿಸಿದರು.

# ಅನುಭವ ಮಂಟಪದ ಭಾವಚಿತ್ರ ಭಾವುಕನನ್ನಾಗಿಸಿದೆ



■ ವಿಜಯಸಾಕ್ಷಿ ಸುದ್ದಿ, ಗದಗ

ಈ ಜಗತ್ತಿನ ಮೊದಲ ಸಂಸತ್ತಿನ ಭಾವಚಿತ್ರ ಅನುಭವ ಮಂಟಪದ ಚಿತ್ರ ನನ್ನನ್ನು ಭಾವುಕನನ್ನಾಗಿಸಿದೆ. ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಮಹಾ ಮಾನವತಾವಾದಿ ಬಸವಣ್ಣನವರು ಮತ್ತು ವಚನಗಾರ್ತಿ ಅಕ್ಕಮಹಾದೇವಿಯವರೊಂದಿಗೆ ಚರ್ಚಿಸುತ್ತಿರುವ ಈ ಚಿತ್ರ ತುಂಬಾ ಮನಮೋಹಕವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಅಭಿಮಾನದಿಂದ ಹೇಳಿದರು.

ಶುಕ್ರವಾರ ವಿಧಾನ ಪರಿಷತ್ತಿನ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ತೆರಳುತ್ತಿದ್ದ ಮುಖ್ಯಮಂತ್ರಿಗಳನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ತಮ್ಮ ಕಚೇರಿಗೆ ಆಹ್ವಾನಿಸಿ, ತಾವು ಹೊಸದಾಗಿ ಅಳವಡಿಸಿರುವ ಅನುಭವ ಮಂಟಪದ ಭಾವಚಿತ್ರವನ್ನು ಮುಖ್ಯಮಂತ್ರಿಗಳಿಗೆ ತೋರಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ರೀತಿ ನುಡಿದರು.

ಸರ್ವರೂ ಶ್ರಮಿಸಿ ಉತ್ಪಾದಿಸಿದ ಉತ್ಪಾದನೆಯನ್ನು ಸರ್ವರೂ ಸಮನಾಗಿ ಹಂಚಿಕೊಳ್ಳಬೇಕೆಂಬ ನಿಲುವು ಬಸವಣ್ಣನವರದ್ದಾಗಿತ್ತು. ಆ ನಿಲುವನ್ನೇ ಇಂದಿಗೂ ನಾವು ಅನುಸರಿಸಿಕೊಂಡು ಜೀವನದ ಪಥದದಲ್ಲಿ ಸಾಗುತ್ತಿದ್ದೇವೆ. ಅವರ ಸ್ಮರಣೆಯ ಈ ಭಾವಚಿತ್ರವು ನಮಗೆ ಸದಾಕಾಲ ಸ್ಫೂರ್ತಿಯಾಗಿದ್ದು, ಈ ಭಾವಚಿತ್ರವನ್ನು ವಿಧಾನಸಭೆ ಮತ್ತು ವಿಧಾನಪರಿಷತ್ತುಗಳಲ್ಲಿಯೂ ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಭಾಪತಿ ಅವರ ವಿಶೇಷ ಅಧಿಕಾರಿ ಶೈಲಾ ಕೆ ಡಿ, ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ ವಾಳ್ವೇಕರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು ಎಂದು ಡಾ. ಬಸವರಾಜ ಧಾರವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 'ನೋ ಬ್ಯಾಗ್ ಡೇ'- ಮಕ್ಕಳು ಖುಷ್!

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದಲ್ಲಿ ಶನಿವಾರ 'ನೋ ಬ್ಯಾಗ್ ಡೇ' ದಿನವನ್ನು ಮಕ್ಕಳು ಸಂಭ್ರಮಿಸಿದರು. ಮಕ್ಕಳು ಬ್ಯಾಗ್‌ನ ಭಾರವಿಲ್ಲದೆ, ಸಂತಸದಿಂದ ಶಾಲೆಗೆ ಆಗಮಿಸಿದ್ದರು.

ಪಟ್ಟಣದ ಎಸ್‌ಟಿಪಿಎಂಬಿ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ, ನೋ ಬ್ಯಾಗ್ ಡೇ ಪ್ರಯುಕ್ತ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಲಾಯಿತು. ವಿದ್ಯಾರ್ಥಿಗಳನ್ನು 5 ಗುಂಪುಗಳಾಗಿ ವಿಂಗಡಿಸಿ, ಪ್ರತಿ ಗುಂಪಿಗೆ ನದಿಗಳ, ಕವಿಗಳ, ಸ್ವಾತಂತ್ರ್ಯ ಹೋರಾಟಗಾರ, ಗ್ರಹಗಳ ಹೆಸರುಗಳನ್ನು ನೀಡಿ, ಶುಚಿತ್ವ ಮತ್ತು ಅರೋಗ್ಯಕರ ಆಹಾರಗಳ ಬಗ್ಗೆ ವಿಷಯವನ್ನು ನೀಡಿ ರಸಪ್ರಶ್ನೆ, ಭಾಷಣ, ಚಿತ್ರಕಲೆ, ಆಟಗಳನ್ನು ಆಡಿಸುವ ಮೂಲಕ ಆಚರಿಸಲಾಯಿತು.

ಶಾಲೆಯ ಮುಖ್ಯಸ್ಥೆ ಸ್ವಾತಿ ಪೈ, ಶಿಕ್ಷಕಿಯರಾದ ಜ್ಯೋತಿ ಮುಳಗುಂದ, ಸಾವಿತ್ರಿ ನಲವಡಿ, ಲೀಲಾ ಬೆಳಗಟ್ಟಿ, ದೀಪಾ ಆದಿ, ಮಂಜುಳಾ ಪಾಟೀಲ, ವೀಣಾ ಜಮನೂರ, ಸುವರ್ಣ ಜಬಡಿ, ರಾಜೇಶ್ವರಿ, ಶಿವಯೋಗೀಶ ವಾಲಿಶೆಟ್ಟರ ಪಾಲ್ಗೊಂಡು ಮಕ್ಕಳಲ್ಲಿ ಸಂಭ್ರಮ ಮೂಡಿಸಿದರು. ಲಿಟಲ್ ಹಾರ್ಟ್ ಸ್ಕೂಲ್, ಎಂಜಿಎಂ ಯುನಿವರ್ಸಲ್ ಸ್ಕೂಲ್, ಫೀನಿಕ್ಸ್ ಸ್ಕೂಲ್, ದಿ ಯುನಿಕ್ ಶಾಲೆ ಸೇರಿದಂತೆ ಸರ್ಕಾರಿ ಶಾಲೆಗಳಲ್ಲಿ ನೋ ಬ್ಯಾಗ್ ಡೇ ಸಂಭ್ರಮ ಕಂಡುಬಂದಿತು.

### ಹಿಂದೂ ಜನಜಾಗೃತಿ ಸಮಿತಿಯಿಂದ ರಾಜ್ಯಪಾಲರಿಗೆ ಮನವಿ

# ಕರ್ನಾಟಕದಲ್ಲಿ ಹಿಂದೂಗಳನ್ನು ರಕ್ಷಿಸಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದ ಬೆನ್ನಲ್ಲೇ ಹಿಂದೂ ಕಾರ್ಯಕರ್ತರ ಮೇಲೆ ವಿವಿಧ ರೀತಿಯ ಆಕ್ರಮಣಗಳು ಹೆಚ್ಚಾಗಿವೆ. ಹಿಂದೂ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಭಯದ ವಾತಾವರಣ ಸೃಷ್ಟಿ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ ಹಿಂದೂಗಳ ರಕ್ಷಣೆ ಮಾಡುವಂತೆ ಸರಕಾರಕ್ಕೆ ನಿರ್ದೇಶನ ನೀಡಬೇಕೆಂದು ಹಿಂದೂ ಜನಜಾಗೃತಿ ಸಮಿತಿಯವರು ಶನಿವಾರ ತಹಸೀಲ್ದಾರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಮನವಿ ಪತ್ರದಲ್ಲಿ, ಹಿಂದೂಗಳಷ್ಟೇ ಅಲ್ಲದೆ ಇತ್ತೀಚೆಗೆ ಜೈನ ಮುನಿ ಆಚಾರ್ಯ ಕಾಮಕುಮಾರ ನಂದಿ ಮಹಾರಾಜರು ಮತ್ತು ಯುವ ಬ್ರಿಗೇಡ್‌ನ ವೇಣುಗೋಪಾಲ ಇವರ ಹತ್ಯೆ ಸೇರಿದಂತೆ ಇನ್ನೂ ಹಲವಾರು ಘಟನೆಗಳು ಸಮಾಜದಲ್ಲಿ ಭಯದ ವಾತಾವರಣ ನಿರ್ಮಾಣ ಮಾಡಿದೆ. ಹಿಂದೂಗಳ ಮೇಲೆ ಆಕ್ರಮಣ ಮಾಡುವವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ವಕ್ಫ್ ಬೋರ್ಡ್ ತನ್ನ ಕಾನೂನನ್ನು ದುರುಪಯೋಗಪಡಿಸಿಕೊಂಡು ಸರಕಾರಿ ಮತ್ತು ಖಾಸಗಿ ಜಮೀನುಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿದೆ. ಆ ಮೂಲಕ ದೇಶದಲ್ಲಿ 8 ಲಕ್ಷ ಎಕರೆ ಜಮೀನನ್ನು ಕಬಳಿಸಿದೆ.

ಆದ್ದರಿಂದ, ಈ ಕಾನೂನನ್ನು ರದ್ದುಗೊಳಿಸಿ ಜಮೀನಿನ ನಿಜವಾದ ಮಾಲೀಕರಿಗೆ ಅದರ ಅಧಿಕಾರವನ್ನು ನೀಡಬೇಕು. ದೇಶದಲ್ಲಿ ಸಮಾನ ನಾಗರಿಕ ಕಾನೂನು ಜಾರಿಗೆ ತರುವ ಮೂಲಕ ಅಲ್ಪಸಂಖ್ಯಾತರ ಹೆಸರಿನಲ್ಲಿ ಜಾರಿಯಲ್ಲಿರುವ ಎಲ್ಲಾ ವಿಶೇಷ ಸೌಲಭ್ಯಗಳು, ಕಾನೂನುಗಳು, ಆಯೋಗಗಳು, ಮಂಡಳಿಗಳು, ಸರಕಾರಿ ಇಲಾಖೆಗಳನ್ನು ರದ್ದುಪಡಿಸಬೇಕು ಮತ್ತು ಎಲ್ಲರಿಗೂ ಸಮಾನ ನಡುವಳಿಕೆ ಸಿಗುವಂತಾಗಬೇಕು ಎಂದು ಮನವಿ ಮೂಲಕ ಎಚ್ಚರಿಸಲಾಯಿತು.

ಸಮಿತಿಯ ಸದಸ್ಯರಾದ ದುಂಡಪ್ಪ ಸವಣೂರ, ಯಲ್ಲಪ್ಪಗೌಡ ಪಾಟೀಲ, ಅಮಿತ ಗುಡಗೇರಿ, ಈರಣ್ಣ ಪೂಜಾರ, ವಿರೇಶ ಚಿಂಚಲಿ ಶೋಭಾ ಇಟಗಿ, ಸುಮಾ ಕುಂಬಾರ, ಬೇಬಿ ರುದ್ರಶೆಟ್ಟಿ, ಮಲ್ಲಮ್ಮ, ನವೀನ ಕುಂಬಾರ ಇತರರಿದ್ದರು.

# ಆಷಾಢದ ಉಡಿ ತುಂಬುವ ಕಾರ್ಯಕ್ರಮ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮುಳಗುಂದ ನಾಕಾದಲ್ಲಿರುವ ಶ್ರೀ ಜಗದಂಬಾ ದೇವಸ್ಥಾನದಲ್ಲಿ ಶ್ರೀ ರಾಜಾಮಾತಾ ಜೀಜಾಬಾಯಿ ಮರಾಠಾ ಮಹಿಳಾ ಮಂಡಳದಿಂದ ಆಷಾಢದ ಉಡಿ ತುಂಬುವ ಕಾರ್ಯಕ್ರಮ ಜರುಗಿತು.

ಆಷಾಢದ ಕೊನೆಯ ಮಂಗಳವಾರದಂದು ಶ್ರೀ ಜಗದಂಬಾ ದೇವಿಗೆ ಮಹಿಳೆಯರು ಉಡಿ ತುಂಬಿ, 108 ನಿಂಬೆಹಣ್ಣಿನ ದೀಪವನ್ನು ಬೆಳಗಿ ಪೂಜೆ ಸಲ್ಲಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶೃತಿ ವಿ ಗ್ವಾರಿ ವಹಿಸಿದ್ದರು.

ಆಷಾಢದ ಉಡಿ ತುಂಬುವ ಬಗ್ಗೆ ಮಂಡಳದ ಅಧ್ಯಕ್ಷೆ ಅಶ್ವಿನಿ ವಿ ಜಗತಾಪ ಅರಿವು ಮೂಡಿಸಿದರು. ಉಡಿ ತುಂಬುವ ಕಾರ್ಯಕ್ರಮವನ್ನು ದೀಪಾ ವಿ ಮಾಡಿಕ್, ಯಶೋಧಾ ವಿ ಘಾಟ್ಗೆ, ವರ್ಷ ಎಸ್ ಯಲಿಗಾರ, ಸುರೇಖಾ ಪಿ ಬೇಂದ್ರೆ ಮತ್ತು ಪುಷ್ಪಾ ಬಿ ಬಾಬರ್ ವಹಿಸಿಕೊಂಡಿದ್ದರು.

ಕಾರ್ಯಕ್ರಮದ ಜವಾಬ್ದಾರಿಯನ್ನು ರೇಖಾ ಎಸ್ ಬೇಂದ್ರೆ, ಅನುಷಾ ಎ ಕೊಪ್ಪಳ, ಪದ್ಮಾ ಹೆಚ್ ಶಳಕೆ, ರೇಖಾ ಬಿ ಕೋರೆಗಾಂವ ಅವರು ವಹಿಸಿಕೊಂಡಿದ್ದರು.

ಕಾರ್ಯಕ್ರಮವನ್ನು ಜಯಶ್ರೀ ಪಿ ಗ್ವಾರಿ ನಿರೂಪಿಸಿದರು. ರೇಣುಕಾ ಎನ್ ಮಾನೆ ವಂದಿಸಿದರು.

### ಶಾಲಾ ಸಂಸತ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಕಾನಿಪ ಅಧ್ಯಕ್ಷ ಮಲ್ಲು ಕಳಸಾಪುರ

# ಪ್ರಜಾಪ್ರಭುತ್ವದ ಮೌಲ್ಯಗಳು ಸಮಾಜದಲ್ಲಿ ಮೇಳೈಸಿವೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇಂದಿನ ಮಕ್ಕಳೇ ಇಂದಿನ ಪ್ರಜೆಗಳಾಗಿದ್ದು, ಶಾಲಾ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಮೂಲ ಆಶಯ, ಚುನಾವಣೆ ಪ್ರಕ್ರಿಯೆ, ಪ್ರಜಾಪ್ರತಿನಿಧಿ ಆಯ್ಕೆ, ಮಂತ್ರಿಮಂಡಲ ರಚನೆ, ಹಕ್ಕು, ಕರ್ತವ್ಯ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವುದು ಶಾಲಾ ಸಂಸತ್ತಿನ ರಚನೆಯ ಮೂಲ ಉದ್ದೇಶವಾಗಿದೆ ಎಂದು ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಲ್ಲು ಕಳಸಾಪುರ ಹೇಳಿದರು.

ಶಿಗ್ಲಿಯ ಕೆ ಜಿ ಮುದಗಲ್ಲ ಪ್ರೌಢಶಾಲೆ, ಜಿ ಎಫ್ ಉಪನಾಳ ಹಿರಿಯ ಪ್ರಾಥಮಿಕ ಶಾಲೆ, ಧವಳಗಿ ತಬ್ಬಣ್ಣ ಪೂರ್ವ ಪ್ರಾಥಮಿಕ ಶಾಲೆ ಹಾಗೂ ಎಸ್ ಎಸ್ ಹುಲಗೂರ ಆಂಗ್ಲ ಮಾಧ್ಯಮ ಶಾಲೆಯ ಸಂಯುಕ್ತಾಶ್ರಯದಲ್ಲಿ ಶನಿವಾರ ಶಾಲಾ ಸಂಸತ್ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮದು ವಿಶ್ವಮಾನ್ಯ ಪ್ರಜಾಪ್ರಭುತ್ವ ರಾಷ್ಟ್ರ. ಪ್ರಜಾಪ್ರಭುತ್ವದ ತತ್ವ-ಸಿದ್ಧಾಂತಗಳಡಿಯೇ ಎಲ್ಲರೂ ಬದುಕಬೇಕಾಗುತ್ತದೆ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ದೇಶದಲ್ಲಿ ನಾವೆಲ್ಲರೂ ಜಾತಿ, ಮತ, ಧರ್ಮ ಬೇಧ ಮರೆತು ಸ್ನೇಹ, ಸಹೋದರತ್ವ ಮತ್ತು ಸೌಹಾರ್ದತೆಯಿಂದ ಬದುಕಬೇಕು. ಹಕ್ಕುಗಳಿಗೆ ಬದ್ಧರಾಗಿರುವಂತೆ ಕರ್ತವ್ಯಗಳನ್ನು ಪಾಲಿಸುತ್ತಾ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗಿ ಬದುಕಬೇಕಾಗುತ್ತದೆ. ಮಹಾಭಾರತ-ರಾಮಾಯಣ ಕಾಲದಿಂದ ಮತ್ತು ಬಸವಣ್ಣನವರ ಕಾಲ ಘಟ್ಟದಲ್ಲಿಯೂ ಪ್ರಜಾಪ್ರಭುತ್ವದ ಮೌಲ್ಯಗಳು ಸಮಾಜದಲ್ಲಿ ಮೇಳೈಸಿದ್ದವು. ಆದರೆ ಸಂವಿಧಾನ ರಚನೆಯಾದ ಮೇಲೆ ಆ ಮೌಲ್ಯಗಳಡಿ ಹಕ್ಕು-ಕರ್ತವ್ಯಗಳು ಕಾನೂನು ಬದ್ಧವಾದವು ಎಂದರು.

> ಶಾಲಾ ಹಂತದಲ್ಲಿ ಚುನಾವಣೆಯ ಮೂಲಕ ವಿದ್ಯಾರ್ಥಿ ಪ್ರತಿನಿಧಿಗಳ ಆಯ್ಕೆ, ಅವರ ಅಧಿಕಾರ, ಹಕ್ಕು-ಕರ್ತವ್ಯ, ಜವಾಬ್ದಾರಿಗಳ ಬಗ್ಗೆ ತಿಳಿಸುವುದು ಶಾಲಾ ಸಂಸತ್ತಿನ ಮೂಲ ಉದ್ದೇಶವಾಗಿದೆ. ಶಾಲಾ ಸಂಸತ್ತು ಶಾಲೆಯ ಸಂಪತ್ತಾಗಿದೆ. ಮಕ್ಕಳು ಕಲಿಕೆಯ ಜತೆಗೆ ಸಂಸ್ಕಾರ, ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳನ್ನು ರೂಡಿಸಿಕೊಂಡು ದೇಶದ ಸತ್ಪ್ರಜೆಗಳಾಗಬೇಕು.
>
> – ಜ್ಯೋತಿ ಗಾಯಕವಾಡ, ಸಿಆರ್‌ಪಿ.

ಹಿರಿಯ ಪತ್ರಕರ್ತ ದಿಗಂಬರ ಪೂಜಾರ ಮಾತನಾಡಿದರು. ಶಾಲಾ ಆಡಳಿತ ಮಂಡಳಿಯ ರಂಜನ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಚಾಮರಾಜ ಹುಲಗೂರ, ಸಿ ಆರ್ ಗೋಕಾವಿ, ಎಸ್ ಎ ಹುಲಗೂರ, ರಾಜರತ್ನ ಹುಲಗೂರ, ಶಿವಾನಂದ ಮೂಲಮನಿ, ರಫೀಕ ಕಲಬುರ್ಗಿ, ಎಂ ಜಿ ಯಲವಗಿ, ಜಿ ಸಿ ದೇವಾಂಗಮಠ, ಎಸ್ ಯು ಯರ್ಲಗಟ್ಟಿ ಸೇರಿದಂತೆ ಪಾಲಕರು, ಶಿಕ್ಷಕ ವೃಂದದವರಿದ್ದರು.

ಶಿಕ್ಷಕರಾದ ಎ ವಿ ತಿಮ್ಮಾಪುರ, ದಿವ್ಯಾ ಬೆಂತೂರ, ಡಿ ಜಿ ಮಠಪತಿ ನಿರ್ವಹಿಸಿದರು. ರಾಷ್ಟ್ರಪತಿಗಳಾಗಿ ವಿದ್ಯಾ ಮರಾಠೆ, ಮುಖ್ಯಮಂತ್ರಿಯಾಗಿ ತಸ್ಲೀಂ ಪಟ್ಟಣದ, ಉಪಮುಖ್ಯಮಂತ್ರಿಯಾಗಿ ವಿಕಾಸ ಮರಾಠೆ ಸೇರಿ ಮಂತ್ರಿಮಂಡಲದ ಸರ್ವ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು.

### ಫಾರ್ಮಿಂಗ್ ಸೊಸೈಟಿ ಜಮೀನು ಸಾಗುವಳಿದಾರ ರೈತರಿಗೆ ಮಾಲೀಕತ್ವ ನೀಡಲು ಶೀಘ್ರ ಕ್ರಮ-ಸಚಿವ ಸಂತೋಷ ಲಾಡ್

# ಸಾಗುವಳಿ ರೈತರಿಗೆ ಅನ್ಯಾಯವಾಗದಂತೆ ಕ್ರಮ

■ ವಿಜಯಸಾಕ್ಷಿ ಸುದ್ದಿ, ಧಾರವಾಡ



ಧಾರವಾಡ, ಅಳ್ನಾವರ ಮತ್ತು ಕಲಘಟಗಿ ತಾಲೂಕಿನಲ್ಲಿ ಸರ್ಕಾರಿ ಜಮೀನನ್ನು ನಿರ್ದಿಷ್ಟ ಅವಧಿಗೆ ಗುತ್ತಿಗೆ ಪಡೆದು ರೈತರಿಗೆ ಉಳುಮೆ ಮಾಡಲು ಫಾರ್ಮಿಂಗ್ ಸೊಸೈಟಿಗಳು ನೀಡಿದ್ದ ಭೂಮಿಯನ್ನು ಸಾಗುವಳಿ ಮಾಡುವ ರೈತರ ಹೆಸರಿಗೆ ಖಾತಾ ಮಾಡಲು ನಿಯಮಾವಳಿ ಪ್ರಕಾರ ಕ್ರಮ ವಹಿಸಲಾಗುವುದು ಎಂದು ರಾಜ್ಯ ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್ ಅವರು ಹೇಳಿದರು.

ಅವರು ಶನಿವಾರ ಸಂಜೆ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಧಾರವಾಡ, ಅಳ್ನಾವರ ಹಾಗೂ ಕಲಘಟಗಿ ತಾಲೂಕಿನ ಫಾರ್ಮಿಂಗ್ ಸೊಸೈಟಿ ಜಮೀನನ್ನು ಸಾಗುವಳಿದಾರರಿಗೆ ಮಂಜೂರಾತಿ ಕುರಿತು ಸಂಬಂಧಿಸಿದ ರೈತರು ಹಾಗೂ ಅಧಿಕಾರಿಗಳೊಂದಿಗೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಧಾರವಾಡ, ಅಳ್ನಾವರ ಹಾಗೂ ಕಲಘಟಗಿ ತಾಲೂಕಿನಲ್ಲಿ ಫಾರ್ಮಿಂಗ್ ಸೊಸೈಟಿಗಳಿಗೆ ಸರ್ಕಾರಿ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಕೃಷಿ ಕಾರ್ಯಗಳಿಗೆ ಬಳಸಲು ಸರ್ಕಾರವು ಜಮೀನು ಮಂಜೂರು ಮಾಡಿತ್ತು. ಈಗ ಸೊಸೈಟಿಗಳು ಅಸ್ಥಿತ್ವ ಕಳೆದುಕೊಂಡಿದ್ದು, ಸಾಗುವಳಿ ಮಾಡುತ್ತಿದ್ದ ರೈತರೆ ಆ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಈಗಾಗಲೇ ವ್ಯವಸಾಯ ಮಾಡುತ್ತಿರುವ ರೈತರ ಹೆಸರಿಗೆ ಜಮೀನಿನ ಮಾಲೀಕತ್ವ ನೀಡಲು ತಿರ್ಮಾನಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಸಂಬಂಧಿಸಿದ ತಾಲೂಕಿನ ತಹಸೀಲ್ದಾರ ಹಾಗೂ ಅವರ ಅಧಿಕಾರಿಗಳ ಮೂಲಕ ಸೊಸೈಟಿ ಜಮೀನು ಸಾಗುವಳಿ ಮಾಡುತ್ತಿರುವ ರೈತರಿಗೆ ನಮೂನೆ 57ರಲ್ಲಿ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಈಗಾಗಲೇ ಬಹಳಷ್ಟು ರೈತರು ನಿಗಧಿತ ಅರ್ಜಿ ನಮೂನೆಯನ್ನು ಸಲ್ಲಿಸಿದ್ದು, ಸಲ್ಲಿಸಿರುವ ಅರ್ಜಿಗಳು ಪರಿಶೀಲನೆ ಹಂತದಲ್ಲಿವೆ. ಕೆಲವು ರೈತರು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರೂ ನಮೂನೆ 57ರಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ಇಂತಹ ರೈತರಿಗೆ ಅರ್ಜಿ ಸಲ್ಲಿಸಲು ಮತ್ತೊಮ್ಮೆ ಅವಕಾಶ ಮಾಡಿಕೊಡಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗುವುದು ಎಂದು ಸಚಿವರು ಹೇಳಿದರು.

ಫಾರ್ಮಿಂಗ್ ಸೊಸೈಟಿಯ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ರೈತರು, ತಮ್ಮ ಸಾಗುವಳಿ ಜಮೀನನ್ನು ತಮಗೆ ಮಂಜೂರಾತಿ ಮಾಡಿಕೊಡಲು ಬಹುದಿನಗಳಿಂದ ಮನವಿ ಮಾಡುತ್ತಿದ್ದಾರೆ. ಸಾಗುವಳಿದಾರ ರೈತರಿಗೆ ಅನ್ಯಾಯವಾಗದಂತೆ ಕ್ರಮವಹಿಸಿ, ಸರ್ಕಾರದ ನಿಯಮಾವಳಿ ಅನುಸಾರ ಗರಿಷ್ಠ ಮಂಜೂರಾತಿ ಮಾಡಬಹುದಾದ ಮತ್ತು ಈಗಾಗಲೇ ಸಾಗುವಳಿ ಮಾಡುತ್ತಿರುವ ರೈತರಿಗೆ ಆ ಜಮೀನು ಮಂಜೂರಾತಿ ಮಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಮತ್ತು ರೈತರಿಗೆ ನ್ಯಾಯ ಒದಗಿಸುತ್ತೇನೆ ಎಂದು ಸಚಿವರು ತಿಳಿಸಿದರು.

ಉಪವಿಭಾಗಾಧಿಕಾರಿ ಅಶೋಕ ತೆಲಿ ಮಾತನಾಡಿ, ಮೂರು ತಾಲೂಕಿನ ಫಾರ್ಮಿಂಗ್ ಸೊಸೈಟಿ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಯಾವುದೇ ತೊಂದರೆ ಇಲ್ಲ. ಸಚಿವರು ರೈತರ ಈ ಸಮಸ್ಯೆ ಬಗೆಹರಿಸುವ ಕುರಿತು ಆಸಕ್ತಿ ವಹಿದ್ದು, ಆದಷ್ಟು ಬೇಗ ರೈತರ ಈ ಸಮಸ್ಯೆ ಮುಕ್ತಾಯವಾಗಲಿದೆ ಎಂದರು.

ಸಭೆಯಲ್ಲಿ ಸಹಕಾರ ಸಂಘಗಳ ಧಾರವಾಡ ಜಿಲ್ಲಾ ಉಪನಿಬಂಧಕರು, ಅಳ್ನಾವರ ತಹಸೀಲ್ದಾರ ಬಸವರಾಜ ಬೆಣ್ಣಿಶಿರೂರ, ಕಲಘಟಗಿ ತಹಸೀಲ್ದಾರ ಯಲ್ಲಪ್ಪ ಗೋಣೆಣ್ಣನವರ, ಧಾರವಾಡ ತಹಸೀಲ್ದಾರ ಕಚೇರಿಯ ಗ್ರೇಡ್-2 ತಹಶೀಲ್ದಾರ ಹಣಮಂತ ಕೊಚ್ಚರಗಿ, ಶೀರಸ್ತೆದಾರ ಮಂಜುನಾಥ್ ಗುಳಪ್ಪನ್ನವರ, ಧಾರವಾಡ ವೃತ್ತದ ಕಂದಾಯ ನಿರೀಕ್ಷಕ ಗುರು ಸುಣಗಾರ, ಪ್ರಕರಣಗಳ ನಿರ್ವಾಹಕಿ ರಂಜಿತಾ ಹಿರೇಮಠ, ಭೂದಾಖಲೆಗಳ ಇಲಾಖೆಯ ಧಾರವಾಡ ಮತ್ತು ಅಳ್ನಾವರ ತಾಲೂಕಾ ಸಹಾಯಕ ನಿರ್ದೇಶಕ ರಾಜಶೇಖರ ಹಳ್ಳೂರ, ಕಲಘಟಗಿ ತಾಲೂಕಾ ಸಹಾಯಕ ನಿರ್ದೇಶಕ ಎಸ್.ಸಿ.ಕುಲಕರ್ಣಿ ಮತ್ತು ಧಾರವಾಡ, ಅಳ್ನಾವರ, ಕಲಘಟಗಿ ತಾಲೂಕುಗಳ ಫಾರ್ಮಿಂಗ್ ಸೊಸೈಟಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ಸಂಬಂಧಪಟ್ಟ ಜಮೀನುಗಳ ರೈತರು, ಸಾಗುವಳಿದಾರರು, ಸಂಬಂಧಪಟ್ಟ ಗ್ರಾಮಗಳ ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು, ಸಾರ್ವಜನಿಕರು ಭಾಗವಹಿದ್ದರು.

### ನುಡಿ ಮೃದಂಗ ಮೊಳಗಲಿ ಕನ್ನಡದ ತರಂಗ ಕಾರ್ಯಕ್ರಮಕ್ಕೆ ಶಾಸಕ ಪ್ರದೀಪ ಈಶ್ವರ ಚಾಲನೆ

# ಜೀವನದಲ್ಲಿ ನಿರ್ದಿಷ್ಟ ಗುರಿಯಿಟ್ಟುಕೊಳ್ಳಿ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ



ನಿಜವಾದ ನಿರ್ಧಾರವನ್ನು ವಿದ್ಯಾರ್ಥಿ ವಯಸ್ಸಿನಲ್ಲಿ ತೆಗೆದುಕೊಳ್ಳಬೇಕು. ಜೀವನದಲ್ಲಿ ಒಂದು ನಿರ್ದಿಷ್ಟ ಗುರಿಯಿಟ್ಟುಕೊಳ್ಳಬೇಕು. ಆ ಗುರಿಯೆಡೆಗೆ ನಿರಂತರ ಪ್ರಯತ್ನ ಮಾಡಬೇಕು ಎಂದು ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ ಹೇಳಿದರು.

ಶನಿವಾರ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಭಾಂಗಣದಲ್ಲಿ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಕನ್ನಡ ಹಬ್ಬ ನುಡಿ ಮೃದಂಗ ಮೊಳಗಲಿ ಕನ್ನಡದ ತರಂಗ ಕಾರ್ಯಕ್ರಮಕ್ಕೆ ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ತಂದೆ ತಾಯಿ, ಪಾಲಕರಿಲ್ಲದ 22 ಮಕ್ಕಳಿಗೆ ಇಂದು ಶಿಕ್ಷಣ ನೀಡುತ್ತಿರುವೆ. ಹೃದಯ ಗೆಲ್ಲುವರರಿಗಿಂತ ಹೃದಯ ಕಾಪಾಡುವವರು ದೊಡ್ಡವರು. ಬಿಳಿ ಚಾಪಿಸ್ ವಿದ್ಯೆ ಕೊಟ್ಟರೆ, ಬಿಳಿ ಬಟ್ಟೆ ಆರೋಗ್ಯ ಕೊಡುತ್ತದೆ. ಬೈಯಿಸಕೊಳ್ಳೋಕೆ ರೆಡಿಯಾಗಿರಬೇಕು. ಆಗ ಜೀವನದಲ್ಲಿ ಏನಾದರೂ ಸಾಧಿಸಬಹುದು. ನಿಮ್ಮ ವಿಚಾರಗಳು ದೊಡ್ಡದಾಗಿರಲಿ. ನಿಮ್ಮನ್ನು ನೀವು ಗುರುತಿಸಿಕೊಳ್ಳಬೇಕು ಎಂದು ತಿಳಿಸಿದರು.

ಬಡವರ ಮನಸ್ಸಿನಲ್ಲಿ ಹೆಸರು ಉಳಿಸಿಕೊಳ್ಳುವ ಕೆಲಸ ಮಾಡಿ. ನಿಮ್ಮ ಮೇಲೆ ನೀವು ನಂಬಿಕೆಯಿಡಿ. ಪರೀಕ್ಷೆಯಲ್ಲಿ ಫೇಲಾದರೆ ಆತ್ಮಹತ್ಯೆ ಮಾಡಿಕೊಳ್ಳಬೇಡಿ.

ತಂದೆ ತಾಯಿಯನ್ನು ಕಳೆದುಕೊಂಡು, 12 ತರಗತಿಯಲ್ಲಿ ಇರುವಾಗಲೇ ಕೋಚಿಂಗ್ ಸೆಂಟರ್ ಆರಂಭಿಸಿ ಜೀವನ ಕಂಡುಕೊಂಡೆ. 17 ಸರ್ವೆ ವರದಿ ಪ್ರಕಾರ ಚುನಾವಣೆಯಲ್ಲಿ ಸೋಲುತ್ತೀನಿ ಎಂದು ಹೇಳಿದರೂ, 23 ದಿನದಲ್ಲಿ ಚುನಾವಣೆಯಲ್ಲಿ ಗೆದ್ದು ಬಂದೆ ಎಂದು ತಮ್ಮ ಜೀವನಾನುಭವವನ್ನು ಹಂಚಿಕೊಂಡರು.

ಜೀವನದಲ್ಲಿ ಏನು ಮಾಡಬೇಕು ಎಂದು ಮನವರಿಕೆ ಮಾಡಿಕೊಳ್ಳಿ. ಬದುಕಿನಲ್ಲಿ ಏನಾದರೂ ಒಂದು ಸಾಧನೆ ಮಾಡಲು ಅಣಿಯಾಗಬೇಕು. ಪ್ರಯತ್ನಕ್ಕೆ ಒಂದಲ್ಲ ಒಂದು ದಿನ ಫಲ ಸಿಕ್ಕೆ ಸಿಗುತ್ತದೆ.

ದೊಡ್ಡದಾಗಿ ಕನಸು ಕಾಣಿ, ಅದನ್ನು ನನಸು ಮಾಡಿಕೊಳ್ಳಬೇಕು. ಜೀವನದಲ್ಲಿ ಬೆಳೆಯುತ್ತೇನೆ ಎಂದು ಕನಸು ಕಾಣಿರಿ. ಹೆಚ್ಚಿನ ವಿದ್ಯಾಭ್ಯಾಸ ಮಾಡದ ಡಿ.ವಿ.ಜಿ, ಶೇಕ್ಸ್‌ಪಿಯರ್ ಅವರ ಕೃತಿಗಳು ಇಂದು ಪಠ್ಯಗಳಾಗಿವೆ. ವಿಭಿನ್ನವಾದ ಯೋಚನಾ ಲಹರಿಯಿಂದ ಓದಿ. ಸಾಮಾಜಿಕ ಜಾಲತಾಣದಲ್ಲಿ ಹೆಚ್ಚಿನ ಸಮಯ ಕಳೆಯಬೇಡಿ. ಓದಿನ ಕಡೆ ಹೆಚ್ಚಿನ ಗಮನಹರಿಸಿ. ಜೀವನದಲ್ಲಿ ಸೋಲೋಕು ರೆಡಿಯಾಗಿರಬೇಕು. ಸಕಾರಾತ್ಮಕವಾಗಿ ಚಿಂತನೆ ಮಾಡಿ. ಅಪ್ಪ ಅಮ್ಮಂದಿರ ಮರ್ಯಾದೆಯನ್ನು ಬೀದಿಗೆ ತರಬೇಡಿ. ಬಡವರಿಗೆ ಸಹಾಯ ಮಾಡಿ. ಒಳ್ಳೆಯತನ ನಿಮ್ಮನ್ನು ಗೆಲ್ಲಿಸುತ್ತದೆ ಎಂದು ಹೇಳಿದರು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಆನಂದಪ್ಪ ಬಿ.ಎಚ್.ಜೋಗಿ ಮಾತನಾಡಿದರು.

ಡಾ.ಪುನೀತ್ ರಾಜಕುಮಾರ್ ಅವರು ನಟಿಸಿದ ರಾಜಕುಮಾರ ಸಿನಿಮಾದ ಬೊಂಬೆ ಹೇಳುತೈತಿ ಮತ್ತೆ ಹೇಳುತೈತಿ ನೀನೇ ರಾಜಕುಮಾರ ಹಾಡಿಗೆ ವಿದ್ಯಾರ್ಥಿಗಳು ದನಿಗೂಡಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಕನ್ನಡಾಂಬೆಯ ರಥದ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ಕರಡಿ ಮಜಲು, ಗೊಂಬೆ ಕುಣಿತ, ಸಮರ ಕಲೆ ವೃಂದದವರು ಭಾಗವಹಿಸಿದ್ದರು.

ಅನಿರುದ್ಧ ತಂಡದವರು ನಾಡಗೀತೆ ಪ್ರಸ್ತುತ ಪಡಿಸಿದರು. ಸಹ ವೈದ್ಯಕೀಯ ಅಧೀಕ್ಷಕರಾದ ಡಾ.ರಾಜಶೇಖರ ದ್ಯಾಬೇರಿ ಸ್ವಾಗತಿಸಿದರು. ದರ್ಶನ ಹಾಗೂ ವಿನುತಾ ನಿರೂಪಿಸಿದರು. ಕನ್ನಡ ಸಂಘದ ಕಾರ್ಯದರ್ಶಿ ಸಹನ ಕೆ.ಎಸ್ ವಂದಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka